THE KARNATAKA PUBLIC LIBRARIES (AMENDMENT) BILL 1975

Motion to Consider

SRI M. MALLIKARJUNASWAMY (Minister for Education) —Madam, I beg to move:

"That the Karnataka Public Libraries (Amendment) Bill, 1975 be taken into consideration."

MADAM SPEAKER —Motion moved.

"That the Karnataka Public Libraries (Amendment) Bill, 1975, be taken into consideration."

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಧ್ಯಕ್ಷರೇ ಕರ್ನಾಟಕ ಲೈಬ್ರರೀಸ್ ಅಮೆಂಡ್‌ಮೆಂಟ್ ಬಿಲ್ ಏನೂ ಇದೆ ಇದನ್ನು 18ನೇ ಫೆಬ್ರುವರಿ 1975ರಂದು ಈ ಸದನದಲ್ಲಿ ಇಡಲಾಯಿತು. ಆದಾದಮೇಲೆ ಅಸೆಂಬ್ಲಿ ಸೈನ್ಡ್ ಆಗಿ ಪಬ್ಲಿಷ್ಡ್ ಆದುದರಿಂದ ಅದು ಜಾರಿಗೆ ಬರಲಿಲ್ಲ. ಮಾನ್ಯ ಅಧ್ಯಕ್ಷರೆ ತಮಗೆ ಗೊತ್ತಿರುವ ಹಾಗೆ 1965ನೇ ಇಸವಿಯಲ್ಲಿ ಕಾನೂನು ಆಯಿತು, ಮತ್ತು ಕಾನೂನಿನ ಅಡಿಯಲ್ಲಿ 1966ರಲ್ಲಿ ನಿಯಮಗಳೂ ಕೂಡ ಲೆಜಿಸ್ಲೇಚರ್‌ನಲ್ಲಿ 1ನೇ ಏಪ್ರಿಲ್ 1966 ರಂದು ರಾಷ್ಟ್ರಾಧ್ಯಕ್ಷರ ಒಪ್ಪಿಗೆ ಆದಮೇಲೆ ಜಾರಿಗೆ ಬಂದಿತು. ಜಾರಿಗೆ ಬಂದಮೇಲೆ ಕೆಲವು ಕಂಡಿಷನ್‌ಗಳು ಬದಲಾವಣೆಯಾದುದರಿಂದ ಈ ಒಂದು ತಿದ್ದುಪಡಿಯನ್ನು ತರಬೇಕಾಯಿತು. ಸೆಕ್ಷನ್ 3 ಸಬ್ ಕ್ಲಾಸ್ 2ರ (ಎ) ಪ್ರಕಾರವಾಗಿ ಮಿನಿಸ್ಟರ್ ಆಫ್ ಎಜುಕೇಷನ್ ಏನು ಇದ್ದಾರೆ ಅವರು ಹದಿನಾಲ್ಕು ಸ್ಟೇಟ್ ಲೈಬ್ರರಿ ಅಥಾರಿಟಿ ಎಕ್ಸ್ ಅಫಿಷಿಯೋ ಪ್ರೆಸಿಡೆಂಟ್ ಆಗಿ ಇರುತ್ತಾರೆ. ಆದರ ಕೆಲವು ಸಂದರ್ಭಗಳಲ್ಲಿ ಸ್ಟೇಟ್ ಲೈಬ್ರರಿಗೆ ಸಂಬಂಧಪಟ್ಟ ವಿಷಯಗಳನ್ನು ಬೇರೆ ಮಂತ್ರಿಗಳಿಗೆ ಈ ಒಂದು ಖಾತೆಯನ್ನು ಕೊಟ್ಟಂತ ಸಂದರ್ಭದಲ್ಲಿ ಅದಕ್ಕೆ ಅನುಕೂಲವಾಗುವಂತಾ ರೀತಿಯಲ್ಲಿ ಯಾರು ಖಾತೆಯನ್ನು ವಹಿಸಿಕೊಂಡಿರುತ್ತಾರೊ ಅವರು ಈ ಒಂದು ಸ್ಟೇಟ್ ಲೈಬ್ರರಿ ಅಥಾರಿಟಿಗು ಅಧ್ಯಕ್ಷರಾಗಿ ಕೆಲಸ ಮಾಡಬೇಕಾಗುತ್ತದೆ ಆದುದರಿಂದ ಈ ವಿಷಯವನ್ನು ಮನಸಿನಲ್ಲಿಟ್ಟುಕೊಂಡು ಈ ಒಂದು ಅಮೆಂಡ್‌ಮೆಂಟ್ ತೆಗೆದುಕೊಂಡು ಬಂದಿದ್ದೇವೆ ಮತ್ತೆ ಆ ಅಮೆಂಡ್‌ಮೆಂಟಿನ್ನು ತರುವುದರಿಂದ ಯಾರು ಈ ಖಾತೆಯನ್ನು ವಹಿಸಿಕೊಂಡಿರುತ್ತಾರೆ, ಲೈಬ್ರರಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಯಾರಿಗೆ ಸೇರಿರುತ್ತದೆಯೋ ಅಂಥ ಮಂತ್ರಿಗಳು ಇದಕ್ಕೆ ಎಕ್ಸ್ ಅಫಿಶಿಯೋ ಪ್ರೆಸಿಡೆಂಟ್‌ರಾಗಿ ಇರುತ್ತಾರೆ. ಮತ್ತೆ ಸೆಕ್ಷನ್ 18ರಲ್ಲಿ ನಾವು ಒಂದು ಬದಲಾವಣೆ ಮಾಡಿ ಆಕ್ಟ್ ಮಾಡಿದಂತ ಸಂದರ್ಭದಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳ ಡಿಸಿಗ್ನೇಷನ್ ಬದಲಾಯಿಸಿರುವುದರಿಂದ ಡೆಪ್ಯುಟಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಎಂದು ಹೇಳಿ ಜಾಯಿಂಟ್ ಆಫ್ ಡಿಸಿಗ್ನೇಷನ್ ಆಗಿರುವುದರಿಂದ ಇಲ್ಲೂ ಕೂಡ ಒಂದು ಬದಲಾವಣೆಯನ್ನು ಮಾಡುವುದಕೆ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೇವೆ.

ಮೂರನೆಯದಾಗಿ ಲೈಬ್ರರಿಗೆ ಸಂಬಂಧಪಟ್ಟ ಫೀಸಿಸ್ ಏನು ಇವೆ. ಆ ಫೀಸಿಸ್‌ಗಳನ್ನು ಸಂಗ್ರಹ ಮಾಡತಕ್ಕವರು ತೆರಿಗೆಯನ್ನು ಸ್ಥಳೀಯ ಸಂಸ್ಥೆಗಳಿಂದ ವಸೂಲು ಮಾಡುತ್ತಾರೆ. ಸ್ಥಳೀಯ ಸಂಸ್ಥೆಗಳು ವಸೂಲು ಮಾಡತಕ್ಕಂಥ ಸಂದರ್ಭದಲ್ಲಿ ಅದನ್ನು ವಸೂಲು ಮಾಡುವುದಕ್ಕೆ ತಗಲತಕ್ಕಂಥ ಖರ್ಚುವೆಚ್ಚವನ್ನು ಕೊಡತಕ್ಕಂಥ ವಿಷಯದಲ್ಲಿ ಸರ್ಕಾರ ರೀ ಇಂಬರ್ಸ್ ಮಾಡಬೇಕೆಂದು ಹೇಳಿ ಮನಸಿಗಳು ಡೆಪ್ಯುಟಿ ಕಮಿಷನರ್ ಇಂದ ಡಿವಿಜನಲ್ ಕಮಿಷನರ್ ಇಂದ ರೆವೆನ್ಯೂಕಮಿಷನರ್ ಬಂದಮೇಲೆ 10 ಪರ್ಸೆಂಟ್ ಎಂದರೆ ಸುಮಾರು ಎರಡುಲಕ್ಷ ಐವತ್ತು ಸಾವಿರ ರೂಪಾಯಿಗಳು ಆಗುತ್ತದೆ. ಇದು ನ್ಯಾಯವಾದುದು ; ಇದನ್ನು ಕೊಡಬೇಕು ಎಂದೆ ತಿದ್ದುಪಡಿಯನ್ನು ತಂದುದು ಆಗಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. 1969ನೇ ಇಸವಿಯಿಂದ ಸರ್ಕಾರದವರು ಪೆಂಡಿಂಗ್ ದಿಸ್ ಫಾರ್ಮುಲ ಅಮೆಂಡ್‌ಮೆಂಟ್ ಈಗಾಗಲೇ ಜಾರಿಗೆ ತಗೆದು

ಕೊಂಡು ಬಂದಿರುವುದರಿಂದ ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೇವೆ. ಮಾನ್ಯ ಸದಸ್ಯರು ಈ ತಿದ್ದುಪಡಿಗೆ ಪೂರ್ಣ ಬೆಂಬಲವನ್ನು ಕೊಡಬೇಕೆಂದು ಹೇಳಿ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ)—ಮಾನ್ಯ ಸಭಾಧ್ಯಕ್ಷಣಿಯವರೆ ಇಂದು ಮಾನ್ಯ ವಿದ್ಯಾಮಂತ್ರಿಗಳು ಮಂಡಿಸಿರತಕ್ಕಂಥ ಕರ್ನಾಟಕ ಪಬ್ಲಿಕ್ ಲೈಬ್ರರಿ ಅಮೆಂಡ್‌ಮೆಂಟ್ ಬಿಲ್ 1975 ನ್ನು ಇಲ್ಲಿ ತಂದಿದ್ದಾರೆ. ಅದು ಹೆಚ್ಚಿನ ವಿವಾದಕ್ಕೆ ಆಸ್ಪದ ಇಲ್ಲದಂತೆ ಈ ಮಸೂದೆಯನ್ನು ತಂದಿದ್ದಾರೆ ಆದರೂ ಕೂಡ ಈ ಸಂದರ್ಭದಲ್ಲಿ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ ಒಂದನೆಯದಾಗಿ ಈ ರಾಜ್ಯ ಸಾರ್ವಜನಿಕರಿಗೆ ಕೊಡಿಗೆಯಾಗಿ ಕೊಟ್ಟಿರತಕ್ಕಂಥಾದ್ದು ಎಂದರೆ ವಾಚನಾಲಯಗಳು ಮತ್ತು ಪುಸ್ತಕಭಂಡಾರಗಳು ಇದು ಓದು ಬರಹ ಬರತಕ್ಕಂಥವರಿಗೆ ಒಂದು ದೊಡ್ಡ ಆಸ್ತಿ ಎಂದು ಹೇಳಿದರೆ ಅದು ತಪ್ಪಾಗಲಾರದು. ವಿದ್ಯಾದಾನವೆಂದರೆ ಎಲ್ಲ ದಾನಗಳಿಗಿಂತಲೂ ದೊಡ್ಡದು. ಪುಸ್ತಕ ಬಂಡಾರಗಳು ಏನು ಇವೆ ಇವು ಸಾರ್ವಜನಿಕರಿಗೆ ಹೆಚ್ಚಿನ ಉಪಯೋಗವನ್ನು ಕೊಡತಕ್ಕಂಥ ಒಂದು ಉತ್ತಮವಾದ ಸಂಸ್ಥೆಗಳಾಗಿರುತ್ತದೆ. ಇದರಲ್ಲಿ ಸ್ವಲ್ಪ ತೆರಿಗೆಯ ಹೊರೆ ಜನರ ಮೇಲೆ ಬಿದ್ದರೂ ಕೂಡ ಸರಿಯಾದ ರೀತಿಯಲ್ಲಿ ಪ್ರಯೋಜನವನ್ನು ನಾಗರೀಕರಿಗೆ ಒದಗಿಸಿಕೊಟ್ಟರೆ ಅದು ಹೊರೆಯಾಗುವುದಕ್ಕೆ ಬದಲಾಗಿ ಅದರಿಂದ ಪ್ರತಿಫಲ ದೊರೆಕುತ್ತದೆ ಎಂದು ನಂಬಿಕೊಂಡಿರುವವರಲ್ಲಿ ನಾನು ಒಬ್ಬನಾಗಿದ್ದೇನೆ. ಮತ್ತು ಇದರಲ್ಲಿ ಮುಖ್ಯವಾಗಿ ಚೀಫ್ ಲೈಬ್ರರಿಗೆ ಸಂಬಂಧಪಟ್ಟಹಾಗೆ ಚೀಫ್ ಲೈಬ್ರರಿಯನ್ ಯಾರು ಇದ್ದಾರೋ ಅವರು ಬಹಳ ದಕ್ಷರು ಎಂದು ಹೇಳುತ್ತಾರೆ. ಮತ್ತೆ ಕೆಲವು ಸಂದರ್ಭದಲ್ಲಿ ಅವರ ಬಗ್ಗೆ ಕೆಲವು ದೂರುಗಳೂ ಬಂದಿರುತ್ತವೆ. ನನಗೆ ಸ್ವತಃ ಯಾವುದೂ ಗೊತ್ತಿಲ್ಲ. ನಾನು ಹೇಳುವುದಾದರೂ ಇಷ್ಟೇ ದೂರುಗಳಿಗೆ ಅವಕಾಶಗಳನ್ನು ಕೊಡದಂತೆ ಸಮರ್ಪಕವಾಗಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋದರೆ ಚೆನ್ನಾಗಿರುತ್ತದೆ. ಇದರಲ್ಲಿ ಎಷ್ಟು ಸತ್ಯಾಂಶಗಳು ಇವೆ ಎನ್ನುವುದನ್ನು ವಿಚಾರ ಮಾಡಿ ಈ ನಂಬಿಕೆಯು ಯಾವ ವಿವಾದಕ್ಕೆ ಆಸ್ಪದವಿಲ್ಲದೆ ಕೆಲಸ ಮಾಡಿಕೊಂಡು ಹೋಗುವುದಕ್ಕೆ ಗಮನವನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಂದು ನಾನು ನಂಬಿದ್ದೇನೆ.

2—30 P. M.

ಈಗ ಬೆಂಗಳೂರಿಗೆ ಸಂಬಂಧಪಟ್ಟಹಾಗೆ ಆಸ್ತಿಗಳ ತೆರಿಗೆಯ ಮೇಲೆ ಮತ್ತು ಆಕ್ಟ್ರಾಯ್ ತೆರಿಗೆಗಳ ಮೇಲೆ ಲೈಬ್ರರಿ ಸೆಸ್ ಮೂರು ಪರ್ಸೆಂಟ್ ಹಾಕಿ ಮನೆಗಂದಾಯದಿಂದ ಮೂರು ಕೋಟಿ ರೂಪಾಯಿ ಬರುತ್ತವೆ ಹಾಗೂ ಆಕ್ಟ್ರಾಯಿನಿಂದ 9 ಕೋಟಿ ರೂಪಾಯಿ. ಒಟ್ಟು 12 ಕೋಟಿ ರೂಪಾಯಿ ಬಿದ್ದಿರುತ್ತದೆ. ಶೇಕಡ ಮೂರು ಪರ್ಸೆಂಟ್ ಅಂದರೆ ಬಜೆಟ್ ಪ್ರಕಾರ 36 ಲಕ್ಷ ರೂಪಾಯಿ ಬೆಂಗಳೂರು ನಗರದ ನಾಗರೀಕರಿಂದ ಲೈಬ್ರರಿ ಸೆಸ್ ಮುಖಾಂತರ ವಸೂಲು ಮಾಡಿ ಸರ್ಕಾರಕ್ಕೆ ಕೊಡುತ್ತಾರೆ. ಇಡೀ ರಾಜ್ಯಕ್ಕೆಲ್ಲಾ ಸೇರಿಸಿದರೆ ಬರುವುದರಲ್ಲಿ ಅರ್ಧದಷ್ಟು ಬೆಂಗಳೂರಿನಲ್ಲಿ ಬರುತ್ತದೆ. ಈ ರೀತಿ ಹೆಚ್ಚಿನ ವರಮಾನ ಬರತಕ್ಕ ನಗರಕ್ಕೆ ಕೆಲವು ಅನುಕೂಲಗಳನ್ನು ಮಾಡಿಕೊಡಬೇಕಾದುದು ಅಗತ್ಯವಾದುದು ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈಗಾಗಲೇ ಪಟ್ಟಣದ ನಾನಾ ಭಾಗಗಳಲ್ಲಿ ಪುಸ್ತಕ ಭಂಡಾರಗಳನ್ನು ತೆರೆದಿದ್ದಾರೆ. ಅನೇಕ ಸಂದರ್ಭಗಳಲ್ಲಿ ಪುಸ್ತಕಭಂಡಾರಗಳನ್ನು ತೆರೆಯುವುದಕ್ಕೆ ಸಿದ್ಧವಾಗಿದ್ದರೂ ಮುಖ್ಯವಾಗಿ ಬೇಕಾದಂಥ ಸ್ಥಳಾವಕಾಶ ಅದರ ನ್ಯೂನತೆ ಮತ್ತು ಕೊರತೆಯಿರುವುದರಿಂದ ಈ ಕೆಲಸ ಎಷ್ಟು ಯಶಸ್ವಿಯಾಗಿ ನಡೆಯಬೇಕೋ ಅಷ್ಟು ಯಶಸ್ವಿಯಾಗಿ ನಡೆದಿಲ್ಲ ಎಂದು ತಿಳಿಯಲ್ಪಟ್ಟಿದೆ. ಆದ್ದರಿಂದ ಕಾರ್ಪೊರೇಷನ್ನಿನವರು ಹಾಗೂ ಸಾರ್ವಜನಿಕರು ಸ್ಥಳಾವಕಾಶವನ್ನು ಒದಗಿಸಿಕೊಡುವುದಕ್ಕೆ ಹೆಚ್ಚಿನ ಸಹಾಯವನ್ನು ಮಾಡಬೇಕಾದುದು ಅಗತ್ಯ ಎಂದು ಹೇಳುತ್ತೇನೆ. ಅವರಲ್ಲೂ ಮುಖ್ಯವಾಗಿ ಕಾರ್ಪೊರೇಷನ್ನಿನವರು ಹೆಚ್ಚು ಕಟ್ಟಡಗಳನ್ನು ಕಟ್ಟಿಸಿಕೊಟ್ಟರೆ ಹೆಚ್ಚಿನ ಉಪಯೋಗವಾಗುತ್ತದೆಯೇನೋ ಎಂದು ಅನ್ನಿಸುತ್ತದೆ ಖಾಸಗಿಯವರ ಕಟ್ಟಡಗಳಲ್ಲಿ ಲೈಬ್ರರಿಗೆ ಅಷ್ಟು ಚೆನ್ನಾಗಿ ನಡೆಸುವುದಕ್ಕಾಗುವುದಿಲ್ಲ. ವ್ಯವಸ್ಥಿತವಾದ ವಾಚನಾಲಯಗಳನ್ನು ಇದಾಗುವುದಕ್ಕೆ ಸರಿಯಾದ ವ್ಯವಸ್ಥೆ ಆಗಬೇಕಾದರೆ ಸರಿಯಾದ ಕಟ್ಟಡಗಳು ಆಗಬೇಕು. ಆದ್ದರಿಂದ ಕಟ್ಟಡಗಳನ್ನು ಕಟ್ಟಿಸುವುದರ ಬಗ್ಗೆ ಸರ್ಕಾರ ಮತ್ತು ಕಾರ್ಪೊರೇಷನ್ನಿನವರು ಕಳಕಳಿ ಸಾರ್ವಜನಿಕರ ಸಹಾಯವನ್ನು ತೆಗೆದುಕೊಂಡು ಈ ಸಮಸ್ಯೆಯನ್ನು ಮುಖ್ಯವಾಗಿ ಬಗೆಹರಿಸಬೇಕು.

ಎರಡನೆಯದಾಗಿ ಅನೇಕ ಬಡಹುಡುಗರಿಗೆ ಪಠ್ಯಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ತಕ್ಕ ಧಾರುವುಡಿಲ್ಲ. ತಾಂತ್ರಿಕ ಶಿಕ್ಷಣ ಅಥವಾ ಮೆಡಿಕಲ್‌ಗೆ ಬೇಕಾದಂಥ ಪುಸ್ತಕಗಳ ಬೆಲೆ ಜಾಸ್ತಿ ನಮ್ಮ ಮನೆಯಲ್ಲಿ ಎರಡು ಪುಸ್ತಕಗಳನ್ನು ಕೊಂಡುಕೊಂಡರು. ಎರಡು ಪುಸ್ತಕಕ್ಕೆ 500 ರೂಪಾಯಿ ಬೆಲೆಯಾಯಿತು. ಅನೇಕರಿಗೆ ಪುಸ್ತಗಳನ್ನು ಕೊಳ್ಳುವುದಕ್ಕೆ ಶಕ್ತಿ ಧಾರುವುದಿಲ್ಲ. ಮೆಡಿಕಲ್ ಕಾಲೇಜ್‌ಗೆ ಸೇರಿರುವ ವಿದ್ಯಾರ್ಥಿ ಪೂರ್ತಿ ಎಲ್ಲಾ ಪುಸ್ತಕಗಳನ್ನೂ ಕೊಂಡುಕೊಳ್ಳ ಬೇಕಾದರೆ ಸುಮಾರು 2½ ಸಾವಿರ ರೂಪಾಯಿವರೆಗೂ ಆಗುತ್ತದೆ. ಆದ್ದರಿಂದ ಸಾರ್ವಜನಿಕ ಪುಸ್ತಕಭಂಡಾರಗಳಲ್ಲಿ ಮೆಡಿಕಲ್‌ಗೆ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಪಟ್ಟ ಹೆಚ್ಚು ಜಲೆ ಬಾಳತಕ್ಕ ಪುಸ್ತಕಗಳನ್ನು ತರಿಸಿ ಹೆಚ್ಚಿನ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಟ್ಟರೆ ಬಡತನದಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಉಪಯೋಗವಾಗುತ್ತದೆ. ಆದುದರಿಂದ ಇದಕ್ಕೆ ಹೆಚ್ಚಿನ ಗಮನ ಕೊಡಬೇಕಾದುದು ಅಗತ್ಯ ಎಂದು ಅತ್ಯಾಯಪೂರ್ವಕವಾಗಿ ಹೇಳುತ್ತೇನೆ. ಕನರಾ ಬ್ಯಾಂಕ್ ನವರು ಬುಕ್ ಬ್ಯಾಂಕ್ ಸ್ಕೀಂ ಎಂದು ಮಾಡಿದ್ದಾರೆ. ಆ ಬುಕ್ ಬ್ಯಾಂಕ್ ಸ್ಕೀಂನಿಂದ ಸಾಕಷ್ಟು ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಈ ಕಲಸವನ್ನು ಲೈಬ್ರರಿ ಅಥಾರಿಟಿಯವರು ಮಾಡಬೇಕಾಗಿತ್ತು, ಇದನ್ನು ಕನರಾ ಬ್ಯಾಂಕಿನವರು ಮಾಡುತ್ತಿರುವುದು ಶ್ಲಾಘನೀಯವಾದುದು. ಆದ್ದರಿಂದ ಇಂತಹ ಯೋಜನೆಗಳ ಬಗ್ಗೆ ಸರ್ಕಾರ ಸಾಕಷ್ಟು ಗಮನ ಕೊಟ್ಟು ಬಡ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು. ಗ್ರಂಥ ಭಂಡಾರಗಳಲ್ಲಿ ಮೆಡಿಕಲ್‌ಗೆ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಹಾಗೂ ಇತರ ಶಿಕ್ಷಣಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಒಂದು ಕಾಪಿಯನ್ನು ತರಿಸಿಡುವುದರ ಬದಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಗಳನ್ನು ತರಿಸಿಟ್ಟು ವಿದ್ಯಾರ್ಥಿಗಳಿಗೆ ಹೆಚ್ಚಿನ ಸಾಕಷ್ಟು ಒದಗಿಸಿಕೊಡುವ ಬಗ್ಗೆ ಗಮನ ಕೊಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನಮ್ಮ ದೇಶದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಅನೇಕ ಬದಲಾವಣೆಗಳಾಗುತ್ತಿವೆ ಈ ಬದಲಾವಣೆಯಾಗುತ್ತಿರುವ ಕಾಲದಲ್ಲಿ ಆರ್ಥಿಕ ವಿಚಾರವನ್ನು ಸಾಮಾಜಿಕ ವಿಚಾರವನ್ನು ಜನರು ತಿಳಿದುಕೊಳ್ಳುವಹಾಗೆ ಶಿಕ್ಷಣ ಬಗೆದಿರತಕ್ಕ ಪುಸ್ತಕಗಳನ್ನು ಕರೆಂಟ್ ಆಫೇರ್ಸ್‌ಗೆ ಸಂಬಂಧಪಟ್ಟಹಾಗೆ ಪುಸ್ತಕಗಳನ್ನು ತರಿಸಿದಬೇಕಾದುದು ಅಗತ್ಯವಾಗಿದೆ. ಅದನ್ನೂ ಕೂಡ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಅತಿ ಮುಖ್ಯವಾಗಿ ಮಕ್ಕಳ ಗ್ರಂಥಭಂಡಾರಗಳು Children's Library ಅನೇಕ ಕಡೆ ಇಲ್ಲ. ಇಂಡಿಯನ್ ಇನಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಎಂದು ಬೆಂಗಳೂರಿನಲ್ಲಿದೆ ಅಲ್ಲಿ ಚಿಲ್ಡ್ರನ್ಸ್ ಲೈಬ್ರರಿ ಪ್ರಾರಂಭ ಮಾಡಿದ್ದಾರೆ. ಅದು ಬಹಳ ಉಪಯುಕ್ತವಾಗಿದೆಯೆಂದು ಕೇಳಿದ್ದೇನೆ. ಆದ್ದರಿಂದ ಇದರ ಬಗ್ಗೆ ಮಾಹಿತಿ ಪಡೆದು ಮಕ್ಕಳ ಗ್ರಂಥಭಂಡಾರಗಳನ್ನು ಹೆಚ್ಚು ಜನ ಮಕ್ಕಳಿರತಕ್ಕ ಪ್ರದೇಶಗಳಲ್ಲಿ ನಾನಾ ಭಾಗಗಳಲ್ಲಿ ತೆರೆದರೆ ಹೆಚ್ಚಿನ ಉಪಯೋಗವಾಗುತ್ತದೆ. ಏಕೆಂದರೆ ಹೊಟ್ಟೆಪಾಡಿಗೋಸ್ಕರ ಕಡಿಮೆ ಸಂಖ್ಯೆ ಮಕ್ಕಳು ಹೋಗಿ ಓದುವುದಕ್ಕೆ ಅವಕಾಶವುದಿಲ್ಲ ಅಷ್ಟು ಅನುಕೂಲಗಳಿರುವುದಿಲ್ಲ ಆದ್ದರಿಂದ ಮಕ್ಕಳಿಗೇ ಪ್ರತ್ಯೇಕವಾಗಿ ಲೈಬ್ರರಿ ತೆರೆದರೆ ಒಳ್ಳೆಯದು ಇದರ ಬಗ್ಗೆಯೂ ಕೂಡ ಯೋಚನೆ ಮಾಡಬೇಕು. ಕಾರ್ಮಿಕ ಕಾರ್ಖಾನೆಗಳ ಹತ್ತಿರ ಅವರಿಗೆ ತಿಳಿಯತಕ್ಕ ಭಾಷೆಯಲ್ಲಿ ವಿಚಾರಗಳು ತಿಳಿಯುವಹಾಗೆ ಸಣ್ಣ ಸಣ್ಣ ಪುಸ್ತಕಗಳು ಯಾವುವಾದರೂ ಇವೆಯೆ ಅಂಥದ್ದನ್ನು ಲೈಬ್ರರಿಗಳಲ್ಲಿ ತರಿಸಿಟ್ಟರೆ ಒಳ್ಳೆಯದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪಬ್ಲಿಸಿಟಿ ಶಿಕ್ಷಣ (ಅಡ್ವರ್ಟೈಸಿಮೆಂಟ್, ಪಬ್ಲಿಸಿಟಿ) ಲೈಬ್ರರಿಯವರು ಏನಾದರೂ ಸಮಾಜ ಮಾಡುವುದಕ್ಕೆ ಗುತ್ತಿದೆಯೇ ಎಂಬ ಬಗ್ಗೆ ಯೋಜನೆ ಮಾಡಬೇಕು.

ಲೈಬ್ರರಿಗೆ ಸಂಬಂಧಪಟ್ಟಹಾಗೆ ಸಲಹಾ ಸಮಿತಿಗಳನ್ನು ಏರ್ಪಾಡು ಮಾಡುವಾಗ ನಿಜವಾಗಿ ಯಾರು ಸರಿಯಾಗಿ ಸಲಹೆಗಳನ್ನು ಕೊಡುತ್ತಾರೆಯೋ ಅಂಥವರನ್ನು ಸದಸ್ಯರನ್ನಾಗಿ ಚುನಾಯಿಸಿ ಸಲಹಾ ಸಮಿತಿಗೆ ಹಾಕಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೆಲಸಗಳು ಚೆನ್ನಾಗಿ ನಡೆಯಬೇಕಾದರೆ ಸಂಬಂಧಪಟ್ಟ ಸಲಹಾ ಸಮಿತಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವಂತಿರಬೇಕು ಸಂಖ್ಯೆಗೆ ನಾನು ಒಬ್ಬ ಸದಸ್ಯ ಎಂದು ಕುಳಿತುಕೊಂಡು ಹೋಗುವವರಿದ್ದರೆ ಏನು ಪ್ರಯೋಜನವಾಗುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ತಿಳಿದುಕೊಂಡಿರುವವರನ್ನು ಮತ್ತು ಆಸಕ್ತಿ ಧಾರುವವರನ್ನು ಸದಸ್ಯರನ್ನಾಗಿ ಹಾಕುವುದಕ್ಕೆ ಸೂಚನೆ ಮಾಡಿ ಕಮಿಟಿಗಳನ್ನು ಕಾನ್‌ಸ್ಟಿಟ್ಯೂಟ್ ಮಾಡುವಾಗ ಇದನ್ನು ಗಮನದಲ್ಲಿಟ್ಟು

ಕೊಂಡು ಮಾಡಬೇಕು. ಈಗ ತಂಗಿರತಕ್ಕ ಬಿಲ್ಡಿನಲ್ಲಿ ಹೆಚ್ಚಿನ ಮಾರ್ಪಾಟಿಲ್ಲ. ಮಂತ್ರಿಗಳು ಇಂಚಾರ್ಜ್ ಫೇರ್ಮನ್ ಆಗುವುದು ಒಂದು. ಡಿಸ್ಟ್ರಿಕ್ಟ್ ಎಜುಕೇಷನ್ ಆಫೀಸರ್ ಬದಲು ಈಗ ಡೆಪ್ಯುಟಿ ಡೈರೆಕ್ಟರ್ ಬಂದಿದ್ದಾರೆ. ಈ ಮಾರ್ಪಾಟು ಆಗಬೇಕಾದ್ದು ಅಗತ್ಯವಾದುದು. ಇದನ್ನು ಬೆಂಗಳೂರು ಸಿಟಿಗೆ ಸಂಬಂಧಪಟ್ಟಹಾಗೆ ತಂದಿದ್ದಾರೆ. ಕೆಲಸ ಸಮರ್ಪಕವಾಗಿ ನಡೆದು ಹೆಚ್ಚಿನ ಪ್ರಯೋಜನ ಜನರಿಗೆ ಲಭಿಸುವ ರೀತಿಯಲ್ಲಿ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಹೇಳಿದಹಾಗೆ ಲೈಬ್ರೇರಿಯನ್ ವಿಚಾರವಾಗಿ ಬೀದಿಯಲ್ಲಿ ಮಾತನಾಡಿಕೊಳ್ಳತಕ್ಕ ದೂರುಗಳಿವೆ. ಅದಕ್ಕೆ ಅವಕಾಶ ಕೊಡುವಾರದೆಂದು ಮಕ್ಕೊಮ್ಮೆ ತಮ್ಮ ಗಮನಕ್ಕೆ ತಂದು ಈ ಬಿಲ್ಲಿಗೆ ನನ್ನ ಸ್ವಾಗತಬಯಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಎಂ. ಎಸ್ ಕೃಷ್ಣನ್ (ವಂಲ್ಲೇಶ್ವರಂ ಕ್ಷೇತ್ರ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿದ್ಯಾ ಸಚಿವರು ನಮ್ಮ ಮುಂದೆ ಇಟ್ಟಿರತಕ್ಕ ಮಸೂದೆ ಸ್ವಾಗತಾರ್ಹವಾದುದು. ಲೈಬ್ರರಿಗಳನ್ನು ಸರಿಯಾಗಿ ನಡೆಸುವುದರ ಬಗ್ಗೆ ಮತ್ತು ಅದಕ್ಕೆ ಬೇಕಾದಂತ ವ್ಯವಸ್ಥೆ ಮಾಡುವುದಕ್ಕೆ ಸಂಘಟನಾತ್ಮಕವಾದ ಕೆಲವು ವಿಷಯಗಳ ಬಗ್ಗೆ ಮಸೂದೆಯಲ್ಲಿ ಹೇಳಿದ್ದಾರೆ. ವಂಂತ್ರಿಗಳಿಲ್ಲದೇ ಹೋದರೆ ಇನ್ನೊ ಬ್ಬರು ಇರಬೇಕು ಡೆಪ್ಯುಟಿ ಡೈರೆಕ್ಟರ್ ಇರಬೇಕು ಎಂಬ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಹೇಳಿದ್ದೀರಿ ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವ್ಯವಸ್ಥೆ ಎಂದ ಮೇಲೆ ಸಂಘಟನೆ ಸರಿಯಾಗಿ ಇರಬೇಕಾಗುತ್ತದೆ ಯಾರಾದರೂ ಒಬ್ಬರು ಮಂತ್ರಿಗಳು ಇಲ್ಲದೇ ಹೋದರೆ ಖಾರಾದರೂ ಜವಾಬ್ದಾರಿ ಹೊತ್ತು ಆ ಕೆಲಸ ನಡೆಸಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಇದರ ಬಗ್ಗೆ ನಾನು ಹೆಚ್ಚಿಗೆ ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇದೇ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬೇಕಾದುದು ಎಂದರೆ ಲೈಬ್ರರಿಗಳನ್ನು ಹೆಚ್ಚು ಮಾಡುವಂತ ಲೈಬ್ರರಿ ಚಳುವಳಿ ಏನಿದೆ ಅದು ಅತಿ ಮುಖ್ಯವಾದುದು ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಆದರಲ್ಲೂ ಇದು ದೊಡ್ಡ ಚಳುವಳಿಯಾಗಿ ರೂಪಿಸಬೇಕೆನ್ನುವ ಅಭಿಪ್ರಾಯವನ್ನು ಇಟ್ಟುಕೊಳ್ಳಬೇಕೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಏತಕ್ಕೆಂದರೆ ಅತಿ ಮುಖ್ಯವಾದ ಜವಾಬ್ದಾರಿ ಸರ್ಕಾರದ ಮೇಲೆ ಇರುವುದು ಎಂದರೆ ಜನರಿಗೆ ತಿಳಿವಳಿಕೆ ಕೊಡುವಂತಾದ್ದು. ತಿಳುವಳಿಕೆ ಇಲ್ಲದೇ ಎಷ್ಟೋ ವಿಷಯಗಳು ದೇಶದಲ್ಲಿ ನಡೆಯುತ್ತವೆ. ಅದು ದೇಶದ ಆರ್ಥಿಕ ಪರಿಸ್ಥಿತಿ ಬಗ್ಗೆ ಇರಬಹುದು, ಸಾಮಾಜಿಕ ವಿಷಯಗಳ ಬಗ್ಗೆ ಇರಬಹುದು ಅಥವಾ ರಾಜಕೀಯ ವಿಷಯಗಳ ಬಗ್ಗೆ ಇರಬಹುದು, ತಾಂತ್ರಿಕ, ಶೈಕ್ಷಣಿಕ ವಿಷಯಗಳ ಬಗ್ಗೆ ಇರಬಹುದು ಅದು ಯಾವುದೇ ವಿಷಯಗಳ ಬಗ್ಗೆ ಇದ್ದರೂ ಸಹ ವಿಷಯವನ್ನು ತಿಳಿದುಕೊಳ್ಳದೇ ಇರುವುದರಿಂದ ತೊಡಕುಗಳು ಜಾಸ್ತಿಯಾಗುತ್ತದೆ ಎಂಬುದು ತಮಗೆಲ್ಲಾ ಗೊತ್ತಿರುವ ವಿಚಾರವಾಗಿದೆ. ಕೆಲವು ವಿಷಯಗಳಲ್ಲಿ ನಮ್ಮ ದೇಶದಲ್ಲಿ ಹೇಳುವುದಕ್ಕೆ, ತಯಾರು ಇರುವುದಿಲ್ಲ ಆದ್ದರಿಂದ ಅಂತಹ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶ ಇರಬೇಕಾಗುತ್ತದೆ. ನನಗೆ ತಿಳಿದಮಟ್ಟಿಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ. ಸಮತಾವಾದ ರಾಷ್ಟ್ರಗಳಲ್ಲಿ ಇದನ್ನು ಲೈಬ್ರರಿ ಮೂವ್‌ಮೆಂಟ್ ಎಂದು ಕರೆದಿದ್ದಾರೆ. ಅಲ್ಲಿ ಲೈಬ್ರರಿ ಚಳುವಳಿಯನ್ನು ವ್ಯಾಪಕವಾದ ರೀತಿಯಲ್ಲಿ ಮುಖ್ಯವಾದ ಆದ್ಯತೆಯನ್ನು ಕೊಟ್ಟು ಬೆಳೆಸುತ್ತಾ ಹೋಗುತ್ತಿದ್ದಾರೆ. ಇದನ್ನು ಹಲವಾರು ರೂಪದಲ್ಲಿ ಬೆಳೆಸುತ್ತಿದ್ದಾರೆ. ಭಾರಿ ಕಟ್ಟಡಗಳಲ್ಲಿ ಲೈಬ್ರರಿಗಳನ್ನು ಸ್ಥಾಪನೆ ಮಾಡುವುದು ಮಾತ್ರವಲ್ಲ ಅದನ್ನು ದೊಡ್ಡ ದೊಡ್ಡ ರೀತಿಯಲ್ಲಿ ಮಾಡಿದ್ದಾರೆ. ಆದರೆ ಅದರ ಜೊತೆಯಲ್ಲಿ ನನಗೆ ತಿಳಿದ ಮಟ್ಟಿಗೆ ಎಲ್ಲಾ ಗ್ರಾಮಂಗಳಲ್ಲೂ ಪರಿಣಾಮಕಾರಿಯಾಗಿ ಈ ಲೈಬ್ರರಿ ಚಳುವಳಿಯನ್ನು ತೆಗೆದುಕೊಂಡು ಹೋಗುವುದಕ್ಕೆ ಲೈಬ್ರರಿ ಮೂವ್‌ಮೆಂಟನ್ನು ತಂದಿದ್ದಾರೆ ಮತ್ತು ಮೂವಿಂಗ್ ಲೈಬ್ರರಿಯನ್ನು ಈ ದಿನ ಅಲ್ಲಿ ಮಾಡಿದ್ದಾರೆ. ಬಸ್‌ಗಳಲ್ಲಿ ಪುಸ್ತಕಗಳನ್ನು ತೆಗೆದುಕೊಂಡು ಹೋಗುತ್ತಾರೆ, ಮತ್ತೆ ಪುಸ್ತಕಗಳನ್ನು ಕಲೆಕ್ಟ್ ಮಾಡಿಕೊಂಡು ಬರುತ್ತಾರೆ. ಈ ರೀತಿ ಓದುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಈ ರೀತಿಯಲ್ಲಿ ಮಾಡಿರುವುದರಿಂದ ಜನರು ವಿಚಾರವನ್ನು ಜ್ಞಾನವನ್ನು ಬೆಳೆಸಿಕೊಳ್ಳುವುದಕ್ಕೆ ಅವಕಾಶವಾಗಿದೆ. ಅನೇಕ ವಿಷಯಗಳಲ್ಲಿ ಏನು ಅಪಪ್ರಚಾರ ನಡೆಯುತ್ತಿದೆಯೋ ಅದನ್ನು ತಡೆಗಟ್ಟುವುದಕ್ಕೆ ಇದರಿಂದ ಸಾಧ್ಯವಾಗಿದೆ. ದೇಶವನ್ನು ಮುಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗಿದೆ. ಇದನ್ನು ನನ್ನ ಅನುಭವದಿಂದ ಸಮತಾವಾದ ರಾಷ್ಟ್ರಗಳಲ್ಲಿ ಹೆಚ್ಚಾಗಿ ನೋಡಿದ್ದೇನೆ ಆ ಒಂದು ದೃಷ್ಟಿಕೋನವನ್ನು ಇಟ್ಟುಕೊಂಡು ತಾವು ಸಹ ಈ ಲೈಬ್ರರಿ ಚಳುವಳಿಯನ್ನು ಬೃಹದಾಕಾರವಾಗಿ ನಮ್ಮ ರಾಜ್ಯದಲ್ಲಿಯೂ ಬೆಳಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕಾಗಿ ಹಣದ ಕೊರತೆ ಇದೆ ಆದರೂ ಇದಕ್ಕೆ ಆದ್ಯತೆಯನ್ನು ಕೊಡಬೇಕಾದುದು ಮುಖ್ಯ ಆದ್ದರಿಂದ ಹಣದ ಕೊರತೆಯನ್ನು ಭರ್ತಿ ಮಾಡಿ ಇದಕ್ಕೆ ಆದ್ಯತೆಯನ್ನು

ಕೊಡಬೇಕಾಗಿದೆ. ನಮ್ಮ ದೇಶದಲ್ಲಿ ಆನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿ ಮಾಡಬೇಕೆಂಬ ಅಭಿಪ್ರಾಯ ಬಹಳ ವಾಗಿ ಇದೆ. ೨೦ ಅಂಶದ ಕಾರ್ಯಕ್ರಮದಲ್ಲಿ ಇದು ನೇರವಾಗಿ ಸೇರಿಕೊಳ್ಳದಿದ್ದರೂ ಸಹ ಒಟ್ಟಿಗೆ ನಿರು ವಾರು ಜನರು ಮಾತನಾಡುತ್ತಿದ್ದಾರೆ ರಾಜ್ಯದಲ್ಲಿ ಗಿಡ ನೆಡಬೇಕು, ಪಿಗ್ಮಾಫಾಸ್ ಕೊಡಬೇಕು, ಈ ತರಹದ ಕೆಲಸವನ್ನು ಮಾಡಬೇಕೆಂದು ಹೇವಾರು ಜನ ಮಂತ್ರಿಗಳು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾನಾದರೂ ಕೂಡ ಹೇಳುತ್ತೇನೆ ಈ ಗಿಡ ನೆಡುವ ವಿಚಾರವನ್ನು ಮಾನ್ಯ ಮಾಜಿ ಶಾಸಕರವರಿಗೆ ಬಿಟ್ಟುಬಿಟ್ಟು, ಈ ವಿದ್ಯಾಭ್ಯಾಸದ ಬಗ್ಗೆ ಮತ್ತು ಅಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿ ಮಾಡುವ ಬಗ್ಗೆ ಏನು ಹೇಳಿದ್ದಾರೆ ಅದು ಬಹಳ ಮುಖ್ಯವಾದ ಕೆಲಸದಿಂದ ನನಗೆ ಅನ್ನಿಸುತ್ತದೆ. ಇವರ ಕಡೆಗೆ ಸಾಕಷ್ಟು ಗಮನವನ್ನು ಕೊಟ್ಟು ಹಣವನ್ನು ಗಳಿಸಿ ಇದನ್ನು ಮಾಡಬೇಕಾದ್ದು ನಮ್ಮ ಮುಂದಿನ ಕರ್ತವ್ಯ. ಇದನ್ನು ಸಾಕಷ್ಟು ರೀತಿಯಲ್ಲಿ ಮಾಡಿಲ್ಲ ಎನ್ನುವುದು ನನ್ನ ಅಭಿಪ್ರಾಯ ಮತ್ತು ನನ್ನ ಟೀಕೆ ಈ ಸಂದರ್ಭದಲ್ಲಿ ಇದೆ. ಎರಡನೆಯದಾಗಿ ಮಾನ್ಯ ಶಾಮಣ್ಣನವರು ಹೇಳಿದ ಹಾಗೆ ಈ ಲೈಬ್ರರಿ ಚಳುವಳಿಯನ್ನು ರೂಪಿಸಬೇಕಾದರೆ ಬರೀ ಸರ್ಕಾರದ ಸಹಕಾರ ಇದ್ದರೆ ಸಾಲದು, ಅದರ ಜೊತೆಗೆ ಎಲ್ಲರ ಸಹಕಾರವೂ ಬೇಕು. ಇದರಲ್ಲಿ ಸರ್ಕಾರದ ಅಧಿಕಾರಿಗಳು ಮತ್ತು ಸರ್ಕಾರದ ಬೇರೆ ವಕ್ತಾರರು ಅಲ್ಲದೇ ಪ್ರಜಾಪ್ರತಿನಿಧಿಗಳನ್ನೂ ಮತ್ತು ಪ್ರಜೆಗಳಿಗೆ ಸಂಬಂಧಪಟ್ಟ ಸಂಸ್ಥೆಗಳನ್ನೊಳಗೊಂಡ ಸಮಿತಿಗಳನ್ನು ಮಾಡಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಬೆಂಗಳೂರಿನಲ್ಲಿ ಅನೇಕ ಟ್ರೇಡ್ ಯೂನಿಯನ್‌ಗಳು ಇವೆ ಈ ಯೂನಿಯನ್‌ಗಳಲ್ಲಿ ಹಣವನ್ನು ಕಲೆಕ್ಟ್ ಮಾಡಿ ಬ್ಯಾಂಕಿನಲ್ಲಿ ಹಾಕುತ್ತಾರೆ ಮತ್ತು ಆಡಿಟ್ ಮಾಡುತ್ತಾರೆ. ಪ್ರತಿವರ್ಷ ಅಕೌಂಟ್ ಕೊಡಬೇಕಾಗುತ್ತದೆ ಈ ಹಣವನ್ನು ಯಾವ ರೀತಿಯಲ್ಲೂ ಲೈಬ್ರರಿಗಳಿಗಾಗಿ ಉಪಯೋಗ ಮಾಡಿ ಕೊಳ್ಳುವುದಿಲ್ಲ. ಇದರ ಬಗ್ಗೆ ತಿಳಿವಳಿಕೆ ಪಡೆದಂತವರು ಕೆಲವರು ಮಾತ್ರ ಲೈಬ್ರರಿಗಳನ್ನು ಸರಿಯಾಗಿ ಇಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಇಲ್ಲಿ ರಾಜಕೀಯ ಪುಸ್ತಕಗಳನ್ನೂ, ಸಾಮಾಜಿಕ ಪುಸ್ತಕಗಳನ್ನೂ ಟ್ರೇಡ್ ಯೂನಿಯನ್‌ಗಳಿಗೆ ಸಂಬಂಧಪಟ್ಟ ಹಾಗೆ ಕಾನೂನು ಪುಸ್ತಕಗಳನ್ನು ಇಟ್ಟಿದ್ದಾರೆ. ತಾವು ಅವರಿಗೆ ಉತ್ತೇಜನವನ್ನು ಕೊಟ್ಟು ಈ ಚಳುವಳಿಯಲ್ಲಿ ಸೇರುವ ಹಾಗೆ ಮಾಡಿದರೆ ಈ ಲೈಬ್ರರಿ ಚಳುವಳಿಯನ್ನು ದೊಡ್ಡ ಪ್ರಮಾಣದಲ್ಲಿ ರೂಪಿಸುವುದಕ್ಕೆ ಸಾಧ್ಯವಾಗುತ್ತದೆ. ಪ್ರತಿಯೊಂದು ಮನೆಮನೆಗೂ ತಿಳಿವಳಿಕೆಯನ್ನೂ ಜ್ಞಾನವನ್ನೂ ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ ಇದರಲ್ಲಿ ಅವರನ್ನು ಸೇರಿಸಿ ಕೊಂಡು ಅವರ ಸಹಕಾರವನ್ನೂ, ಎಂ ಎಲ್ ಎ. ಗಳ ಸಹಕಾರವನ್ನೂ ಟ್ರೇಡ್ ಯೂನಿಯನ್‌ಗಳ, ಬೇರೆ ಬೇರೆ ಸಂಸ್ಥೆಗಳ ಸಹಕಾರವನ್ನು ಪಡೆದು ಅದರ ಮೂಲಕ ಈ ಲೈಬ್ರರಿ ಚಳುವಳಿಯನ್ನು ರೂಪಿಸ ಬೇಕೆಂದು ನನಗನ್ನಿಸುತ್ತದೆ. ಇದೇ ಸಂದರ್ಭದಲ್ಲಿ ಟೀಕೆ ರೂಪವಾಗಿ ಒಂದು ಮಾತನ್ನು ಹೇಳಬೇಕೆಂದರೆ ನನ್ನ ಕ್ಷೇತ್ರದಲ್ಲಿರುವ ಲೈಬ್ರರಿಗಳನ್ನು ನೋಡಿದ್ದೇನೆ, ಸೆಂಟ್ರಲ್ ಲೈಬ್ರರಿಗೆ ಹೋಗಿ ನಾನು ನೋಡಿದ್ದೇನೆ ಮಾನ್ಯ ಶಾಮಣ್ಣನವರು ಪ್ರಜಾಪ್ರಭುತ್ವದಲ್ಲಿ ವಿವಿಧ ರೀತಿಯ ಪುಸ್ತಕಗಳೂ ಇರಬೇಕೆಂದು ಒಂದು ರೀತಿಯಲ್ಲಿ ಹೇಳಿದ್ದಾರೆ. ನಾನು ಅದಕ್ಕೆ ವಿರೋಧ ಇಲ್ಲ. ಈಗ ಏನಾಗಿದೆ ಎಂದರೆ ನಾನೂ ನೀವೂ ಇರುವ ಹಾಗೆ ನಾವು ಸಮತಾವಾದೀ ತತ್ವವನ್ನು ಒಪ್ಪಿಕೊಂಡಿದ್ದೇವೆ ಆದರೆ ಆ ಸಮತಾವಾದಿ ತತ್ವಗಳನ್ನು ಹೇಳುವಂಥ ಪುಸ್ತಕಗಳು ಬಹಳ ಕಡಿಮೆ ಇನೆ ಮಾರ್ಕ್ಸಿಸ್ಟ್ ಪರವಾದ ಲೆನಿನ್ ಪರವಾದ ಪುಸ್ತಕಗಳು ಬಹಳ ಮುಖ್ಯವಾದುವು ಎಂದು ಒಪ್ಪಿಕೊಂಡಿದ್ದರೂ ಆ ಪುಸ್ತಕಗಳನ್ನು ನಾವು ಲೈಬ್ರರಿಗಳಲ್ಲಿ ನೋಡುವುದಿಲ್ಲ ಲೆನಿನ್ ಸೆಲೆಕ್ಟೆಡ್ ವರ್ಕ್ಸ್ ಪುಸ್ತಕವನ್ನೂ ನೋಡುವುದಿಲ್ಲ. ಈ ಪುಸ್ತಕಗಳು ಸಿಕ್ಕುವುದಿಲ್ಲ. ಯಾರೋ ಬರೆದಿರುವಂತ ಪರೆಸೋಕಿನ್ ನಾವಲ್‌ಗಳು ಸಿಕ್ಕುತ್ತವೆ. ಈಗಿನ ಕಾಲದ ಪರಿಸ್ಥಿತಿಗನುಗುಣವಾಗಿ ಇರಬೇಕು ಎಂದು ಹೇಳುವುದು, ಕೈವರ್, ಡಿಟಕ್ಟಿವ್, ಸಕ್ಸ್ ಇದರ ಆಧಾರದ ಮೇಲೆ ಇರುವ ಪುಸ್ತಕಗಳನ್ನು ಲೈಬ್ರರಿಯಲ್ಲಿ ಇಡುವುದಾದರೆ ನನಗನ್ನಿಸಂತ್ತದೆ ಯಾವ ದೃಷ್ಟಿಯನ್ನೂ ಇಟ್ಟುಕೊಂಡು ಲೈಬ್ರರಿ ಚಳುವಳಿಯನ್ನು ರೂಪಿಸಬೇಕೆಂದಿದ್ದೀರೋ ಅದಕ್ಕೆ ಇದಂ ವಿರುದ್ಧವಾಗುತ್ತದೆಂದು ಅನ್ನಿಸುತ್ತದೆ. ಈ ಒಂದು ದೃಷ್ಟಿಯಿಂದ ಸಮತಾವಾದದ ತತ್ವವನ್ನು ಹೇಳುವಂತ ಪುಸ್ತಕಗಳನ್ನು ಹೆಚ್ಚುಹೆಚ್ಚು ಇಡುವುದಕ್ಕೆ ಒತ್ತಾಯ ಮಾಡ ಬೇಕೆಂಬುದೇ ನನ್ನ ಅಭಿಪ್ರಾಯ. ಇದಲ್ಲದೇ ಬೇರೆ ಬೇರೆ ರಾಜಕೀಯ ಪುಸ್ತಕಗಳು ನಮ್ಮ ಜೇಬಲ್ಲಿ ಬರುತ್ತಿವೆ, ಅದರಲ್ಲಿ ಸರ್ಕಾರವನ್ನು ಟೀಕೆ ಮಾಡುವಂತಹವು ಇರಬಹುದಂ, ಕೆಲವು ಸರ್ಕಾರವನ್ನು ಒಪ್ಪಿ ಕೊಳ್ಳುವಂತದ್ದೂ ಇರಬಹುದು. ಅದು ಬೇರೆ ಸಮಾಚಾರ. ಪುಸ್ತಕಗಳಿಗೆ ಅಧ್ಯಕೆ ನೀಡುವುದಕ್ಕೆ ಸೆನ್ಸಾರ್‌ಶಿಪ್ ಇರಬೇಕೆಂದು ಹೇಳುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ ಕೆಲವು ಅಂಟಿ ಸೋವಿಯತ್ ಪುಸ್ತಕಗಳೂ ಇವೆ ನನ್ನಮ್ಮ ದೇಶಕ್ಕೂ ಸೋವಿಯತ್ ರಷ್ಯಾಕ್ಕೂ ಮಂದೂರ ಭಾಂಧವ್ಯ ಇದೆ ಅನೇಕ ವಿಷಯಗಳಲ್ಲಿ ಅರ್ಥಿಕ ರಾಜಕೀಯ ಸಹಕಾರಗಳನ್ನು ಪಡೆಯುತ್ತಿದ್ದೇವೆ. ಅಂಟಿ ಸೋವಿಯತ್ ಪುಸ್ತಕಗಳನ್ನು ಇಲ್ಲಿ ಇಟ್ಟರೆ, ಅವನ್ನು ಜನ ಓದಿದರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ನೋಡಬೇಕು. ಇದರಲ್ಲಿ ವಿಶ್ವಾಸೇತರ ಯೂಸ್

ಮಾಡಬೇಕು. ಅಂಟಿ ಸೋಷಿಯಲ್ ಪುಸ್ತಕಗಳನ್ನು ತಡೆಗಟ್ಟಬೇಕು ಎಂಬುದೇ ನನ್ನ ಸ್ಪಷ್ಟವಾದ ಅಭಿಪ್ರಾಯ. ಸೈದ್ಧಾಂತಿಕ ಪುಸ್ತಕಗಳನ್ನು ಹೆಚ್ಚು ಮಾಡುವುದಕ್ಕೆ ಅವಕಾಶ ಇರಬೇಕೆಂದು ಹೇಳುತ್ತೇನೆ. ಈ ತರಹ ಲೈಬ್ರರಿಗಳಿಗೆ ಸ್ಪೆಷಿಫಿಕ್ ಗ್ರಾಂಟ್ಸ್-ಇನ್-ಎಯ್ಡ್ ಕೊಡಬೇಕು ಮತ್ತು ಗೈಡ್‌ಲೈನ್ಸ್ ಇರಬೇಕು. ಇದರ ಬಗ್ಗೆ ಗೈಡ್‌ಲೈನ್ಸ್ ಇಲ್ಲದೇ ಕೊಡಿದರೆ ಯಾವ ತರಹದ ಪುಸ್ತಕಗಳನ್ನು ತೆಗೆದುಕೊಳ್ಳುತ್ತಾರೆ. ಇದಕ್ಕೆ ಒಂದು ಕಮಿಟಿ ಆದರೆ ಚೆನ್ನ. ಈ ಕಮಿಟಿಯವರು ಪುಸ್ತಕಗಳನ್ನು ಸೆಲೆಕ್ಟ್ ಮಾಡುತ್ತಾರೆ ಅಂದರೆ ಈ ಕಮಿಟಿ ಯವರು ಇದಕ್ಕೆ ತಕ್ಕ ರೂಪುರೇಷೆಗಳನ್ನೂ, ಗೈಡ್‌ಲೈನ್ಸ್‌ಗಳನ್ನೂ ಹೇಳಿರುವ ಹಾಗೆ ಕಾಣುವುದಿಲ್ಲ. ಇದರ ಬಗ್ಗೆ ಗೈಡ್‌ಲೈನ್ಸ್ ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ಕರ್ನಾಟಕದವರು ಈ ವಿಷಯದಲ್ಲಿ ಕಾರ್ಯಪಡೆಯನ್ನು ಮಾಡಿದರೆ ಅವರಿಗೆ ಧೈರ್ಯ ಬರುತ್ತದೆ. ಮಾರ್ಕ್ಸಿಸ್ಟ್, ಲೆನಿನ್ ಸೆಲೆಕ್ಟೆಡ್ ವರ್ಕ್ಸ್‌ನ್ನು ಒತ್ತಕ್ಕೆ ತರಿಸುವುದಕ್ಕೆ ಎಂದು ಲೈಬ್ರರಿಯನ್ ಅವರನ್ನು ಪ್ರಶ್ನೆ ಕೇಳಿದಾಗ ಅವರು ಹೇಳಿದರು, ಇದು ಇಲ್ಲ, ಅದನ್ನೆಲ್ಲಾ ತರಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ನಾನು ಕೇಳುತ್ತೇನೆ ಇದಕ್ಕೆ ರಾಜಕೀಯವಾಗಿ ವಿರೋಧ ಇದೆಯಾ ಅಥವಾ ಬೇರೆ ರೀತಿಯಲ್ಲಿ ವಿರೋಧ ಇದೆಯೋ ಏಂದು ಒಂದು ಕಾಲಕ್ಕೆ ಕಮ್ಯುನಿಸ್ಟ್ ಸಿದ್ಧಾಂತವನ್ನು ಒಪ್ಪಿಕೊಳ್ಳದೇ ಇರುವಂತ ಪರಿಸ್ಥಿತಿಯನ್ನು ಸಾಮ್ರಾಜ್ಯಶಾಹಿಗಳು ಮಾಡುತ್ತಿದ್ದರು. ಆ ಪಾರ್ಟಿ ಬ್ಯಾನ್ ಆಗಿತ್ತು. ಈಗ ಆ ಪರಿಸ್ಥಿತಿ ಇಲ್ಲ. ಅವು ಎಲ್ಲಾ ಕಡೆ ಸಿಕ್ಕುತ್ತವೆ. ಇವತ್ತಿನ ದಿವಸ ಬೀದಿಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಈ ರೀತಿ ಲೈಬ್ರರಿಯನ್ನು ನಡೆಸುವಂತ ಕಾನೂನು ಬಂದ ರೀತಿಯನ್ನು ಹೇಳಿದರೆ ಸೋಜಿಗ ಎನಿಸುತ್ತದೆ. ಲೈಬ್ರರಿಯಲ್ಲಿ ಯಾವಯಾವ ಪುಸ್ತಕಗಳು ಇರಬೇಕು ಎಂಬು ದಕ್ಕೆ ಏಂದು ಗೈಡ್‌ಲೈನ್ಸ್ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಶಾಮಣ್ಣನವರು ಹೇಳಿದ ಹಾಗೆ ಟೆಕ್ನಿಕಲ್ ಪುಸ್ತಕಗಳು ಬಹಳ ಮುಖ್ಯವಾಗಿ ಬೇಕು. ಈ ಪುಸ್ತಕಗಳನ್ನು ಲೈಬ್ರರಿಯಲ್ಲಿ ಇಟ್ಟರೆ ಓದ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ. ಇದರ ಬಗ್ಗೆ ನಾನು ಹೆಚ್ಚಾಗಿ ಹೇಳುವುದಿಲ್ಲ. ತಾವು ಈ ಬಿಲ್‌ನಲ್ಲಿ ೧೦ ಪರ್ಸೆಂಟ್ ಅನ್ನು ಹ್ಯಾಂಡ್‌ಲಿಂಗ್ ಚಾರ್ಜಸ್ ಕೊಡಬೇಕೆಂದು ಹೇಳಿದ್ದೀರಿ. ನನ್ನ ಅಭಿಪ್ರಾಯದಲ್ಲಿ ಈ ಹ್ಯಾಂಡ್‌ಲಿಂಗ್ ಚಾರ್ಜಸ್ ಕೊಡಬೇಕೆನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಬಿಲ್ಡಿಂಗ್ಸ್ ಸಿಕ್ಕುವುದಿಲ್ಲ, ಹಣ ಇಲ್ಲ ಹೆಚ್ಚಿಗೆ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಈ ಹ್ಯಾಂಡ್‌ಲಿಂಗ್ ಚಾರ್ಜಸ್ ಅಲ್ಲದೇ ಬಿಲ್ಡಿಂಗ್ ಕಟ್ಟುವುದಕ್ಕೆ ಬೇಕಾದರೆ ಈ ಪರ್ಸೆಂಟ್ಲಿ ಇನ್ನೂ ಹೆಚ್ಚು ಕೊಟ್ಟರೂ ಕೂಡ ನನ್ನ ವಿರೋಧ ಇಲ್ಲ. ಬಿಲ್ಡಿಂಗ್ ಕಟ್ಟುವುದಕ್ಕಾಗಲಿ ಅಥವಾ ಬಾಡಿಗೆಗೆ ತೆಗೆದುಕೊಳ್ಳುವುದಕ್ಕಾಗಲಿ ಹೆಚ್ಚು ಸೆಸ್ಸನ್ನು ಹಾಕಿ ಬಿಲ್ಡಿಂಗ್‌ಗಳನ್ನು ಕಟ್ಟಿ ಲೈಬ್ರರಿಗಳನ್ನು ತೆರೆದರೆ ಅದಕ್ಕೆ ನನ್ನ ವಿರೋಧವಿಲ್ಲವೆಂದು ಹೇಳುತ್ತೇನೆ. ಅದರೆ ಇವತ್ತು ಹ್ಯಾಂಡ್ಲಿಂಗ್ ಚಾರ್ಜಸ್ ಕೊಟ್ಟರೂ ವುದು ಸಾಕಾಗುತ್ತದೋ ಇಲ್ಲವೋ ಅನ್ನಿಸುತ್ತದೆ. ಈಗ ಬಿಲ್ಲನ್ನು ತಿದ್ದುಪಡಿ ಮಾಡಿ ಬಿಲ್ಡಿಂಗ್ ಮಾಡಿದರೆ ಸಂತೋಷ. ತಾವು ಈ ಬಗ್ಗೆ ಗಮನ ಕೊಡಬೇಕು. ತಿದ್ದುಪಡಿ ಮಾಡಿದ ಹೋದರೆ ಹೆಚ್ಚು ಹೆಚ್ಚು ಬಿಲ್ಡಿಂಗ್‌ಗಳ ಬಗ್ಗೆ ಕಾರ್ಪೊರೇಷನ್ ಏರಿಯ ಮತ್ತು ಲೋಕಲ್ ಅಥಾರಿಟೀಸ್‌ನವರಲ್ಲದವರೂ ಗಮನಿಸಿಕೊಟ್ಟು ಮಾಡಬೇಕಾಗುತ್ತದೆ. ಕೆಲವು ಮುಂದುವರಿದ ಏರಿಯಾಗಳಲ್ಲಿ ಅಂದರೆ ಜಯನಗರ, ಮಲ್ಲೇಶ್ವರಂ ಮುಂತಾದ ಕಡೆಗಳಲ್ಲಿ, ಹೆಚ್ಚು ವಿದ್ಯಾವಂತರಿರುವ ಕಡೆಗಳಲ್ಲಿ ಬೇಗ ಲೈಬ್ರರಿಗಳಾಗುತ್ತವೆ. ಹಿಂದುಳಿದ ಪ್ರದೇಶಗಳಾವ ಯಶವಂತಪುರ ಮುಂತಾದ ಕಡೆಗಳಲ್ಲಿ ಕೇಂದ್ರ ಗ್ರಂಥಾಲಯಗಳನ್ನು ನೋಡುವುದೇ ಕಷ್ಟ. ಕಂಟೋನ್‌ಮೆಂಟ್, ಮತ್ತಿತರ ಕಡೆಗಳಲ್ಲಿ ಬಿಲ್ಡಿಂಗ್‌ಗಳಿಲ್ಲದೆ ಗ್ರಂಥಾಲಯಗಳನ್ನು ನೋಡುವುದು ಕಷ್ಟ. ಆದಕಾರಣ ಬಿಲ್ಡಿಂಗ್‌ಗಳ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನ ಮಾಡಬೇಕೆಂದು ಹೇಳುತೇನೆ. ಮತ್ತೊಮ್ಮೆ ಲೈಬ್ರರಿ ಚಳವಳಿ ಬಗ್ಗೆ, ಕಮಿಟಿಗಳ ಬಗ್ಗೆ ಮತ್ತು ಯಾವ ಪುಸ್ತಕಗಳನ್ನು ತರಿಸಬೇಕೆಂಬ ಬಗ್ಗೆ ಗೈಡ್‌ಲೈನ್ಸ್ ಕೊಡಬೇಕೆಂದು ಪುನಃ ಮಾಡಿಕೊಂಡು ಈ ಮಸೂದೆಯನ್ನು ಬೆಂಬಲಿಸುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR DEPUTY SPEAKER.—in the chair]

ಶ್ರೀ ಕೆ.ಆರ್ ಎಸ್. ನಾಯ್ಡು.— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ತಂದಿರತಕ್ಕ ಕರ್ನಾಟಕ ಪಬ್ಲಿಕ್ ಲೈಬ್ರರೀಸ್ ಅಮೆಂಡ್‌ಮೆಂಟ್ ಬಿಲ್ 1976 ಏನು ಇದೆ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ಆಡುವುದಕ್ಕೆ ತಮ್ಮ ಮುಂದೆ ನಿಂತುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ರಾವ್ ಬಹದ್ದೂರ್ ರಂಗನಾಥನ್ ಈಸ್ ಎ ಫಾದರ್ ಆಫ್ ಲೈಬ್ರರಿ ಮೂವ್‌ಮೆಂಟ್ ಇನ್ ಇಂಡಿಯ (father of Library Moment in India) ಅವರ ಕನಸು ಏನು ಇತ್ತು ಅದನ್ನು ನನಸು ಮಾಡಬೇಕು. ಈ ಅಕ್ಟಿನಲ್ಲಿ ಇನ್ನೂ ಕೆಲವು

ಲೋಪ ದೋಷಗಳಿವೆ, ಅಚ್ಚುಕಟ್ಟಾಗಿರತಕ್ಕ ದೋಷದೋಷಗಳ ಬಗ್ಗೆ ಅಮೆಂಡ್‌ಮೆಂಟನ್ನು ತಂದಿದ್ದರೆ ಚನ್ನಾಗಿತ್ತೆಂದು ಸಲಹೆ ಮಾಡುತ್ತೇನೆ. ಲೈಬ್ರರೀಸ್ ಆಂಡ್ ಇಂಟಲೆಕ್ಚುಯಲ್ ಲ್ಯಾಬರೋಟರೀಸ್ (Libraries or intellectual Laboratories) ಎಂದು ಹೇಳುತ್ತಾರೆ. ನನ್ನ ಮಿತ್ರರು ಅನೇಕರು ಮಾತನಾಡತಕ್ಕ ಕಾಲದಲ್ಲಿ ಕೆಲವು ವಿಷಯಗಳನ್ನು ಹೇಳಿದರು ಹಾಗೂ ತಮಗೆ ಗೊತ್ತಿರುವ ಹಾಗೆ ವಿದ್ಯಾಭ್ಯಾಸಕ್ಕೆ ಈ ವರ್ಷ ಸುಮಾರು 111 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೂ ಸಹ, ವಿದ್ಯೆಯು ಪ್ರಗತಿ ಕ್ಷೀಲ 12 ಪರ್ಸೆಂಟ್ ಮಾತ್ರ ಆಗಿದೆ. ಆದಕ್ಕೆ ಮುಖ್ಯವಾದ ಕಾರಣ ಗ್ರಾಮಾಂತರ ಪ್ರದೇಶಗಳಲ್ಲಿದೆ; ಪಟ್ಟಣಗಳಿಗೆ ಬಲಸೆ ಎಂಬುದನ್ನು ಯೋಚನೆ ಮಾಡಬೇಕು. ನಮಗೆ ಗೊತ್ತಿರುವ ಹಾಗೆ ನಾವು ಈಗ ಯೋಜನಾ ಆಯೋಗದಲ್ಲಿದ್ದೇವೆ ಪಿಜ್ಞಾನ ಮತ್ತು ತಾಂತ್ರಿಕ ಯುಗದಲ್ಲಿದ್ದೇವೆ. ಹೀಗಿರತಕ್ಕ ಕಾಲದಲ್ಲಿ ಲೈಬ್ರರಿ ಮೂಮೆಂಟು ಪ್ರತಿ ಗ್ರಾಮಕ್ಕೂ ಹೋಗಬೇಕೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ನಾವು ಎಲ್ಲವನ್ನು ಒಪ್ಪಿಕೊಳ್ಳುತ್ತೇವೆ ಆದರೆ ಹಣದ ಮುಗ್ಗಟ್ಟು ಇದೆಯೆಂದು ಹೇಳುತ್ತಿದ್ದಾರೆ, ಇದಕ್ಕೆ ಏಕೆ ಹಣದ ಮುಗ್ಗಟ್ಟು ಬಂತು? ಶ್ರೀ ರಾಜಾರಾಮ ಮೋಹನರಾಯರು ಒಂದು Trust ನಿಂದ ಸರ್ಕಾರದಿಂದ ಬಿಡುಗಡೆಗೆ ಹಣ ಸಾಲದೆಂದು ತಾವು ತಮ್ಮ ಪ್ರಭಾವ ಬೀರಿ ಹೆಚ್ಚು ಹಣ ತರಿಸಿಕೊಳ್ಳಬೇಕು ಮತ್ತು ಎಜುಕೇಷನ್ ಸೆಸ್ಸನ್ನು ಶೇಕಡ 20 ರಿಂದ 25ರ ವರೆಗೆ ಕಲೆಕ್ಟ್ ಮಾಡಿದರೂ ತಪ್ಪಾಗಲಾರದು. ಏಕೆಂದರೆ ವಿದ್ಯಾಭ್ಯಾಸ ಎಷ್ಟು ಪ್ರಾಮುಖ್ಯವೋ ಪುಸ್ತಕಗಳು ಅಷ್ಟೇ ಪ್ರಾಮುಖ್ಯ. ವಿದ್ಯಾಭ್ಯಾಸಕ್ಕೆ ಒಳ್ಳೆಯ ಕವಿಗಳಿಂದ ರಚಿಸಲ್ಪಟ್ಟ ಸ್ಟಾಂಡರ್ಡ್ ಪುಸ್ತಕಗಳು ಬೇಕಾಗುವುದು ಸಹಜ. ಹೀಗಿರತಕ್ಕ ಕಾರಣದಲ್ಲಿ ರವಿ ಕಾಣದ್ದನ್ನು ಕವಿ ಕಾಣುತ್ತಾನೆಂದು ಹೇಳುತ್ತಾರೆ.

DEPUTY SPEAKER.— Your argument is good, but the phylosophy is not within the scope of the amendment.

ಶ್ರೀ ಕೆ.ಆರ್.ಎಸ್. ನಾಯ್ಡು.— ಎಂತಹ ಪುಸ್ತಕಗಳು ಬೇಕೆಂದು ಯೋಚಿಸಿ ವ್ಯವಸ್ಥೆ ಮಾಡುವುದಕ್ಕೆ ಹಣ ಸಾಲದು ಎಂದು ಹಿನ್ನೆಲೆ ಕೊಡುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮಾಂತ್ರಿಗಳಿಗೆ ಸಲಹೆ ಮಾಡಿದ್ದೇನೆಂದರೆ, ಮಿನಿಸ್ಟರ್ ಇನ್‌ಚಾರ್ಜ್ ಇರುವುದಕ್ಕೆ ಬದಲಾಗಿ ಮಿನಿಸ್ಟರ್ ಫಾರ್ ಸ್ಟೇಟ್ ಇದರೂ ಸಹ ತಪ್ಪಾಗಲಾರದೆಂದು ನನ್ನ ಖಚಿತ ಅಭಿಪ್ರಾಯ. ಇನ್‌ಚಾರ್ಜ್ ಮಿನಿಸ್ಟರು ಪ್ರತಿಯೊಂದು ಇಲಾಖೆಯಲ್ಲೂ ಇರತಕ್ಕ ಕಾಲದಲ್ಲಿ ಇದಕ್ಕೆ ಒಂದು ಇಂಡೆಪೆಂಡೆಂಟ್ ಅಟಾನಮಸ್ ಬಾಡಿ ಏಕಿರಬಾರದೆಂದು ಕೇಳುತ್ತೇನೆ. ಕನ್ಸಲ್ಟೇಟಿವ್ ಕಮಿಟಿ, ಆಡ್ವೈಸರಿ ಬೋರ್ಡ್ ಸ್ಯಾಟಲೈಟ್ ಬಾಡಿಗಳು ಇರುವುದಕ್ಕೆ ಬದಲಾಗಿ ಇಂಡಿಪೆಂಡೆಂಟ್ ಮಂಡಲಿ ಇದರೆ ತಪ್ಪಾಗಲಾರದೆಂದು ಹೇಳುತ್ತೇನೆ. ನಾವು ಕೊಡತಕ್ಕ 10 ಪರ್ಸೆಂಟ್ ಹಣ ಒಂದು ಕಡೆ ಒಂದು ಡಿಸ್ಟ್ರಿಕ್ಟಿಗೆ ಬರಬಹುದು. ಇದೊಂದು ಇಂಡೆಪೆಂಡೆಂಟ್ ಇಲಾಖೆ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಯೊಂದು ಪರ್ಮನೆಂಟ್ ಎಂಪ್ಲಾಯೀಸ್ ಇದ್ದಾರೆಂಬುದನ್ನು ಮರೆಯಬಾರದು. ಕೆಲವು ಕಡೆ 10 ವರ್ಷಗಳಾದರೂ ಟೆಂಪರರಿಯಾಗಿ ಇಟ್ಟುಕೊಂಡು ಬಂದಿದ್ದಾರೆ. ನಿರ್ದಿಷ್ಟವಾದ ಪ್ಲಾನ್ ಪ್ರೋಗ್ರಾಂ ಇಲ್ಲ ಎಂದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ತಮ್ಮ ಕಾಲದಲ್ಲಿಯಾದರು ಟೆಂಪರರಿಯಾಗಿ ತೆಗೆದುಕೊಂಡಿರುವವರನ್ನು ಪರ್ಮನೆಂಟ್ ಮಾಡಬೇಕು ಮತ್ತು ಲೈಬ್ರರಿಗಳಿಗೆ ಹೆಚ್ಚು ಹಣವನ್ನು ಒದಗಿಸಬೇಕು. ಲೈಬ್ರರಿ ಸೈಯನ್ಸ್ ಬಹಳವಾಗಿ ಬೆಳೆಯುತ್ತಿದೆ. ಡಿಸ್ಟ್ರಿಕ್ಟ್ ಟಿಫಿಕೇಷನ್ ಜೆನಿಗ್ರೇಷನ್ ಚೇಂಜ್ ಮಾಡಿದ್ದಾರೆಬರೀ ಎಜುಕೇಷನ್ ಡಿಪಾರ್ಟ್‌ಮೆಂಟ್, ಮೆಡಿಕಲ್ ಎಜುಕೇಷನ್, ಪ್ರೊಫೆಷನಲ್ ಎಜುಕೇಷನ್, ಸ್ಪೆಶಲೈಸೇಶನ್ ಎಂದು ಏನು ಇದೆ ಇದಕ್ಕೆ ಸರಿಯಾದ ಪ್ರಾಮುಖ್ಯತೆ ಕೊಡಬೇಕು ಮತ್ತು ಕ್ಯಾಲಿಫೈಡ್ ಸ್ಟಾಫ್ ಒದಗಿಸಬೇಕೆಂದು ಹೇಳುತ್ತೇನೆ. ಆದರೆ ಕ್ವಾಲಿಫೈಡ್ ಸ್ಟಾಫ್ ಇಲ್ಲ ಎಂದು ಹೇಳಿ ಟೆಂಪರರಿಯಾಗಿ ಅಭ್ಯರ್ಥಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಒಳ್ಳೆಯ ಸಬ್ಜಾವ್ತರನ್ನು ಸ್ಪೆಶಲೈಸ್ಡ್ ಇನ್ ಲೈಬ್ರರಿ ಸೈಯನ್ಸ್ ಅಂಥವರನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಟ್ಟಿನಲ್ಲಿ, ತಮ್ಮ ಕಾಲದಲ್ಲಿ ಹೆಚ್ಚಿನ ರೀತಿಯಲ್ಲಿ ಲೈಬ್ರರಿ ಮೂವ್‌ಮೆಂಟ್ ಗ್ರಾಮಾಂತರ ಪ್ರದೇಶಗಳಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಅವುಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಹೇಳಿ ಈ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೊಣಂದೂರು ಲಿಂಗಪ್ಪ.—ನನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯಾಸಚಿವರು ತಂದಿರುವ ಕರ್ನಾಟಕ ಪಬ್ಲಿಕ್ ಲೈಬ್ರರಿಸ್ ಅಮೆಂಡ್‌ಮೆಂಟ್ ಬಿಲ್ 1975– ಇದನ್ನು ಸ್ವಾಗತಿಸಿ ಎರಡು ಮಾತನ್ನು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ತಿದ್ದುಪಡಿಯಲ್ಲಿರತಕ್ಕ ಅಂಶಗಳು ಬಹಳ ಚಿಕ್ಕ ಅಂಶಗಳು, ಒಂದು ಟೆಕ್ನಿಕಲ್ ಪಾಯಿಂಟ್ ಇನ್ನೊಂದು ಸೆಸ್ಸಿಗೆ ಸಂಬಂಧಪಟ್ಟದ್ದು. ಇದರಲ್ಲಿ ಮಾನ್ಯ ಕೃಷ್ಣನ್‌ರವರು ಮಾತನಾಡುವಾಗ ಹೇಳಿದ ವಿಷಯವನ್ನು ನಾನೂ ಕೂಡ ಸಪೋರ್ಟ್ ಮಾಡುತ್ತೇನೆ ಎಂದು ಮಾತನ್ನು ಹೇಳಬಯಸುತ್ತೇನೆ. ಸ್ವತಂತ್ರ ನಮ್ಮ ದೇಶಕ್ಕೆ ಸ್ವತಂತ್ರ ಬಂದು 30 ವರ್ಷಗಳಾದರೂ ಕೂಡ ವಿದ್ಯಾಭ್ಯಾಸ ಶೇಕಡ 3 ಕ್ಕಿಂತ ಮೇಲೆ ಹೋಗಲಿಲ್ಲ. ಇಂಥ ಸಂದರ್ಭದಲ್ಲಿ ನಾವು ಒಳ್ಳೆಯ ಪ್ರಗತಿಯನ್ನು ಸಾಧಿಸಿದ್ದೇವೆಂದು ಹೇಳಿಕೊಳ್ಳುತ್ತಿದ್ದೇವೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ 100ಕ್ಕೆ ಕನಿಷ್ಠ 85ರಷ್ಟು ಜನಕ್ಕೆ ಅಕ್ಷರಾಭ್ಯಾಸ ಇಲ್ಲ. ವಯಸ್ಕರ ಶಿಕ್ಷಣ ಸಮಿತಿಯೂ ಸಹ ಇಷ್ಟು ಕೆಲಸಮಾಡಬೇಕಾಗಿತ್ತೋ ಅಷ್ಟನ್ನು ಮಾಡಿಲ್ಲ. ಆದುದರಿಂದ ಲೈಬ್ರರಿಗಳು ಕೇವಲ ಪಟ್ಟಣಗಳಿಗೆ ಮತ್ತು ಹೆಚ್ಚು ಮನೆ-ವ ತ ಮತ್ತು ಹೈಸ್ಕೂಲ್‌ಗಳಿರತಕ್ಕ ಊರುಗಳಲ್ಲಿ ಮಾತ್ರ ಇವೆ. ಮತ್ತು ಅಲ್ಲಿ ಬರತಕ್ಕ ಜನರು ಎಂತಹ ಪುಸ್ತಕಗಳನ್ನು ಓದುತ್ತಾರೆ ಅಂತಹ ಪುಸ್ತಕಗಳನ್ನು ಮಾತ್ರ ಅಲ್ಲಿ ಇಡತಕ್ಕ ಪರಿಸ್ಥಿತಿ ಬಂದಿದೆ. ಮಾನ್ಯ ನಾಯ್ಡುರವರು ಮಾತನಾಡುತ್ತಾ ಲೈಬ್ರರೀಸ್ ಆರ್ ದಿ ಇಂಟರೆಕ್ಟುಯಲ್ ರ್ಯಾಬರೋಟರೀಸ್ ಎಂದು ಹೇಳಿದರು. ಅದು ನಿಜ. ನಮ್ಮ ಜನರ ಬುದ್ಧಿಯನ್ನು ಅವರ ವಿಚಾರ ಪ್ರಜ್ಞೆಯನ್ನು ಎಚ್ಚರಗೊಳಿಸತಕ್ಕ ಮತ್ತು ಉನ್ನತ ಗುರಿಯೆಡೆಗೆ ಒಯ್ಯತಕ್ಕ ಪುಸ್ತಕಗಳು ಬೇಕು. ಇವತ್ತು ಅವುಗಳ ಅಭಾವ ಇದೆ. ಆದರೆ ಕನ್ನಡದಲ್ಲಿ ಅಭಾವ ಇದೆಯೆಂಬ ಮಾತನ್ನು ಒಪ್ಪಲಿಕ್ಕೆ ಖಂಡಿತಾ ಸಾಧ್ಯವಿಲ್ಲ. ಏಕೆಂದರೆ ಇವತ್ತು ವಿಶ್ವವಿದ್ಯಾನಿಲಯಗಳು ಕೆನ್ನಡದಲ್ಲಿ ಅನೇಕ ವೈಜ್ಞಾನಿಕ ಮತ್ತು ತಾಂತ್ರಿಕ ಗ್ರಂಥಗಳನ್ನು ತರಲಿಕ್ಕೆ ಪ್ರಯತ್ನ ಮಾಡುತ್ತಿವೆ. ಹಾಗೆಯೇ ಇನ್ನೂ ಅನೇಕ ಸಂಘ ಸಂಸ್ಥೆಗಳು ಮತ್ತು ಅನೇಕ ವ್ಯಕ್ತಿಗಳು ಕೂಡ ನಮ್ಮ ಭಾಷೆಯ ಭಂಡಾರಕ್ಕೆ ಅಪಾರವಾದ ಕೊಡುಗೆಯನ್ನು ಕೊಡುತ್ತಿದ್ದಾರೆ, ಆವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು ಮತ್ತು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಯಾರಿದ್ದಾರೆ ಅವರಿಗೆ ತಮ್ಮ ಪಠ್ಯ ಪುಸ್ತಕಗಳ ಜೊತೆಗೆ ತಿಂಗಳಿಗೆ ಕನಿಷ್ಠಪಕ್ಷ 2-3 ಪುಸ್ತಕಗಳನ್ನಾದರೂ ಓದಿ ತಮ್ಮ ಸಂಬಂಧಪಟ್ಟ ಅಧ್ಯಾಪಕರುಗಳಿಗಾಗಲಿ ಅಥವಾ ಪ್ರೌಢಶಾಲೆ ನರ್ಗಳಿಗಾಗಲಿ ಸಾರಾಂಶಗಳನ್ನು ಒಪ್ಪಿಸುವಂತಹ ನಿಯಮವನ್ನು ಜಾರಿಗೆ ತಂದರೆ ಬಹುಶಃ ಲೈಬ್ರರಿ ಚಳುವಳಿ ಯಶಸ್ವಿಯಾಗುವುದಕ್ಕೆ ಸಹಾಯಕವಾಗುತ್ತದೆಂದು ನಾನು ಭಾವಿಸುತ್ತೇನೆ.

3-00 P.M.

ಇಂಥಾ ಲೈಬ್ರರಿ ಪುಸ್ತಕಗಳನ್ನು ಓದತಕ್ಕ ಜನ ಎಷ್ಟು ಸಂಖ್ಯೆಯಲ್ಲಿ ಇದ್ದಾರೆ ಎನ್ನುವುದನ್ನು ಎಣಿಸಬಹುದು. ಪತ್ರಿಕೆಯನ್ನು ಓದುವವರು ಹೆಚ್ಚು ಸಂಖ್ಯೆಯಲ್ಲಿ ಇಲ್ಲ ಎಂದು ಹೇಳಬಹುದು. ಒಂದು ಪತ್ರಿಕೆಯನ್ನು ಒಬ್ಬರು ಕೊಂಡುಕೊಂಡರೆ ಅದನ್ನು 20 ಜನ ಓದುವವರಿದ್ದಾರೆ. ಶ್ರೀಮಾನ್ ಕೃಷ್ಣನ್‌ರವರು ಹೇಳಿದಹಾಗೆ ಪುಸ್ತಕಗಳ ಒಂದು ಗ್ಯೆಡ್ ಲೈನ್ ಬೇಕು. ಕಾರ್ಲ್‌ಮಾರ್ಕ್ಸ್, ಲೆನಿನ್ ಇಂಥಾ ಪುಸ್ತಕಗಳನ್ನು ಓದಬೇಕು. ಹಾಗೆಯೇ ಹಿಟ್ಲರ್, ಮುಸಲೋನಿ ಅವರ ಹಾನ್ ಲಂಕನ್, ಬರ್ನಾಡ್ ಷಾ, ಹಾಲ್‌ಸ್ಟಾಯ್, ಡಾ।। ರಾಮಮನೋಹರ ಲೋಹಿಯಾ ಇಂಥಾವರ ಚರಿತ್ರೆಯನ್ನು ಓದಬೇಕು. ಜಗತ್ತಿನ ರಾಜಕೀಯ ಮತ್ತು ವಿಜ್ಞಾನಿಗಳ ಗ್ರಂಥಗಳಿಗೆ ಸರಿಯಾದಂತಹ ಪುರಸ್ಕಾರವನ್ನು ಕೊಡಬೇಕು, ಎಲ್ಲವನ್ನೂ ಸಮಾನ ದೃಷ್ಟಿಯಿಂದ ನೋಡಬೇಕು. ಡಾ. ರಾಮಮನೋಹರ ಲೋಹಿಯಾ ಅವರು ಬರೆದಿರುವ ಗ್ರಂಥಗಳು ಕನ್ನಡದಲ್ಲಿ ಆಚ್ಚಾಗಿದ್ದರೂ ಸಹ ನಮ್ಮ ಲೈಬ್ರರಿಗಳಲ್ಲಿ ಅವುಗಳನ್ನು ತೆಗೆದುಕೊಳ್ಳಲೂ ಪಿಂಚರಿಯುತ್ತಿದ್ದಾರೆ. ಆ ಪುಸ್ತಕಗಳ ಲೈಬ್ರರಿಯಲ್ಲಿ ಸಿಕ್ಕುವುದಿಲ್ಲ. ಲೈಬ್ರರಿಯಲ್ಲಿ ಬರೀ ನಾವಲ್‌ಗಳು ಕಾದಂಬರಿಗಳು ಸಿಕ್ಕುತ್ತವೆಯೇ ಹೊರತು ದೊಡ್ಡ ದೊಡ್ಡ ರಾಜಕಾರಿಣಿಗಳು, ಬರೆದ ಪುಸ್ತಕಗಳು ಸಿಕ್ಕುವುದಿಲ್ಲ. ಮಹಾತ್ಮ ಗಾಂಧೀಜಿಯವರು ಬರೆದ ಕೆಲವು ಪುಸ್ತಕಗಳು ಮಾತ್ರ ಸಿಕ್ಕುತ್ತವೆ. ಆದರೆ ಎಲ್ಲಾ ಪುಸ್ತಕಗಳೂ ಸಿಕ್ಕುವುದಿಲ್ಲ. ಒಂದು ವಿಷಾದವಿದೆ ಸಂಗತಿ ಏನೆಂದರೆ ನಮ್ಮ ರಾಜ್ಯದ ಲೈಬ್ರರಿಯಲ್ಲಿ ಅನೇಕ ಕಡೆಗಳಲ್ಲಿ ಪಂಡಿತ್ ಜವಾಹರ್ ಲಾಲ್ ಅವರು ಬರೆದ 'ಮಗಳಿಗೆ ತಂದೆಯ ಒಲವೇ ಎನ್ನುವ ಪುಸ್ತಕ ಕನ್ನಡಕ್ಕೆ ಅನುವಾದ ಮಾಡಿದ ಪುಸ್ತಕ ಎಲ್ಲೂ ಸಿಕ್ಕುತ್ತಾ ಇಲ್ಲ. ಈ ಪುಸ್ತಕ ಏತಕ್ಕೆ ಸಿಕ್ಕುತ್ತಾ ಇಲ್ಲ? ಈ ಪುಸ್ತಕ ಏನಾದರೂ ಮಂಗಮಾಯವಾಗಿದೆಯೋ ಏನೋ ಗೊತ್ತಿಲ್ಲ. ಈ

ಪುಸ್ತಕದ ಬಗ್ಗೆ ಸರ್ಕಾರ ವಿಚಾರ ಮಾಡಬೇಕು. ಮಹಾತ್ಮ ಗಾಂಧೀಜಿಯವರು ಸತ್ಯಾಗ್ರಹದ ಬಗ್ಗೆ, ಜನತಂತ್ರದ ಬಗ್ಗೆ ಬರೆದಂತಹ ಪುಸ್ತಕಗಳು ನಮ್ಮ ಲೈಬ್ರರಿಯಲ್ಲಿ ಕಾಣುವುದಿಲ್ಲ. ನ್ಯೂ ಎಜಿಪ್ಷನ್ ನೆಹರು ಅವರು ಬರೆದ ಮಗಳಿಗೆ ತಂದೆಯು ಬರೆದ ಎನ್ನುವ ಪುಸ್ತಕ ಸಿಕ್ಕುತ್ತಿಲ್ಲ. ಈ ರೀತಿ ಪ್ಲಾನ ಮತ್ತು ನತ್ಯಕ್ಕೆ ಅಪಚಾರ ಲೈಬ್ರರಿ ಪುಸ್ತಕ ಪ್ರಪಂಚದಲ್ಲೂ ನಡೆಯುತ್ತಿದೆ. ನಷ್ಟಗೆ ಏನು ಬೇಕೋ ಅದು ಸಿಕ್ಕವುದಿಲ್ಲ. ಇದರಿಂದ ಏನ ತಿಳಿದುಕೊಳ್ಳಬೇಕು. ಸರ್ಕಾರ ಎಷ್ಟೇ ಮಟ್ಟಿಗೆ ಕೆಟ್ಟದಾರಿಯಲ್ಲಿ ಹೋಗುತ್ತದೆ ಎಂಬುದನ್ನು. ಪ್ರಜಾಪ್ರಭುತ್ವದಲ್ಲಿ ಇಲ್ಲಿನ ಇರತಕ್ಕ ಅಭಿಪ್ರಾಯಗಳನ್ನಾಗಲೀ ಇರತಕ್ಕ ವಿರೋಧಿ ಪಕ್ಷದವರ ಅಭಿಪ್ರಾಯಗಳನ್ನಾಗಲೀ ಜನಗಳು ತಿಳಿಯುವ ದೃಷ್ಟಿಯಿಂದ ಎಲ್ಲಾ ಪುಸ್ತಕಗಳನ್ನೂ ಲೈಬ್ರರಿಯಲ್ಲಿ ಇಡಬೇಕು. ಆ ರೀತಿ ಎಲ್ಲಾ ಪುಸ್ತಕಗಳನ್ನು ಲೈಬ್ರರಿಯಲ್ಲಿ ಇಡದೇ ಹೋದರೆ ತಪ್ಪಾಗುತ್ತದೆ. ಈ ಬಗ್ಗೆ ಶ್ರೀಮಾನ್ ಕೃಷ್ಣನ್ ಅವರು ಹೇಳಿದ್ದನ್ನು ನಾನು ಮೆಚ್ಚುತ್ತೇನೆ. ರಷ್ಯಾ ಚೈನಾ ರೀತಿಯಲ್ಲಿ ಓದುವುದಾದರೆ ಈ ದೇಶ ಮುಂದೆ ಹೇಗೆ ಬರುತ್ತದೆ ಯೋಚ ಮಾಡಬೇಕು. ಪಂಪ ರನ್ನ, ಕುಮಾರವ್ಯಾಸ ಬೆಂದ್ರೆ, ಮಾಸ್ತಿ, ಕುವೆಂಪು ಮತ್ತು ಗಾಲ್ಬಿ ಇಂಥಾ ಕವಿಗಳು ಬರೆದ ಪುಸ್ತಕಗಳು ಲೈಬ್ರರಿಯಲ್ಲಿ ಧಾರಾಳವಾಗಿ ಇರುವ ಹಾಗೆ ಆಗಿದೆ. ನಮ್ಮ ಸರ್ಕಾರದವರು ಕಳುಹಿಸುವ ಪ್ರಕಟಣೆಗಳು ಬಹಳ ಬರುತ್ತವೆ. ಅವರೆ ಎಲ್ಲಾ ಕವಿಗಳು ಬರೆದ ಪುಸ್ತಕಗಳನ್ನು ಪ್ರಕಟಣೆ ಮಾಡುವಂತಹ ಪ್ರಯತ್ನ ಮಾಡಬೇಕು. ಮತ್ತು ಆ ಪುಸ್ತಕಗಳು ಎಲ್ಲಾ ಲೈಬ್ರರಿಗಳಲ್ಲಿಯೂ ಸಿಕ್ಕುವಂತಹ ವ್ಯವಸ್ಥೆಯನ್ನು ಮಾಡಬೇಕು. ಗುಣಕ್ಕೆ ಮಾತ್ಸರ್ಯವಿಲ್ಲ, ಎಲ್ಲರನ್ನೂ ಒಂದೇ ದೃಷ್ಟಿಕೋನದಲ್ಲಿ ನೋಡಬೇಕು. ಎಲ್ಲಾ ಕಡೆಗಳಲ್ಲಿಯೂ ಬೆಳಕು ಬರಬೇಕು, ಎಲ್ಲಾ ಪುಸ್ತಕಗಳೂ ಎಲ್ಲರಿಗೂ ಸಿಕ್ಕುವಂತಾಗಬೇಕು ಎಂದು ನಾನು ಆಪೇಕ್ಷೆ ಮಾಡುತ್ತೇನೆ.

ಇನ್ನು ಲೈಬ್ರರಿಗಳಿಗೆ 10 ಪರ್ಸೆಂಟ್ ಮೇಕಿಜೆನನ್ನು ಗ್ಯಾರಂಟಿ ಕೊಡುವುದು ನಾಲಾದು ಎಂದು ನನ್ನ ಅಭಿಪ್ರಾಯ. ಲೈಬ್ರರಿಗೆ ಪುಸ್ತಕವನ್ನು ಕೊಡುವುದಕ್ಕೆ ಬೆಳಿಗ್ಗೆ ಬೆಳಿಗ್ಗೆ ಸಾಯಂಕಾಲ ಒಟ್ಟು ನಾಲಕರ ಬರುತ್ತಾರೆ. ಅವನಿಗೆ ತಿಂಗಳಿಗೆ 30 ರೂಪಾಯಿಗಳನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ಲೈಬ್ರರಿ ರೂಮಿನ ಕಸ ಹೊಡೆಯುವುದಕ್ಕೆ, ಪುಸ್ತಕಗಳಿಗೆ ಬೈಂಡ್ ಹಾಕುವುದಕ್ಕೆ ಹಣ ಸಾಕಾಗಾಗುವುದಿಲ್ಲ. ಒಂದು ಪುಸ್ತಕಕ್ಕೆ ಬೈಂಡ್ ಹಾಕಿಸಬೇಕಾದರೆ 2 ರೂಪಾಯಿ ಖರ್ಚಾಗುತ್ತದೆ ಲೈಬ್ರರಿ ಬಿಲ್ಡಿಂಗ್ ಬಗ್ಗೆ ಶ್ರೀನಿವಾಸ್ ಶಾಮಣ್ಣನವರು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ ಕೆಲವು ಕಡೆ ಲೈಬ್ರರಿ ಕೆಲವು ಜನ ವಿದ್ಯಾವಂತರ ಮನೆಯ ಹೆಚ್ಚಿಗೆಯಲ್ಲಿದೆ. ಇದು ಸರಿಯಲ್ಲ. ಈ ತರಹ ಪುಸ್ತಕಗಳು ಹೆಚ್ಚಿಗೆಗಳು ಪಂಚಾಯತಿ ಹಾಲಿನಲ್ಲಿರಬೇಕು. ಇದರ ಜೊತಗೆ ಪುಸ್ತಕಗಳ ಸಂಕ್ಯೂಲೇಷನ್ ಇರಬೇಕು ನಂಚಾರಿ ಲೈಬ್ರರಿಯನ್ನು ಸರ್ಕಾರದು ಮಾಡಿದರೆ ಅದರಿಂದ ಹೆಚ್ಚು ಪ್ರಯೋಜನವಾಗುತ್ತದೆ. ಇಪ್ಪತ್ತು ಲೈಬ್ರರಿಯಲ್ಲಿ ಕೆಲಸಕ್ಕೆ ಹುಡುಗರನ್ನು ಟೆಂಪರರಿಯಾಗಿ ತೆಗೆದುಕೊಂಡು ಕೆಲಸ ನಡೆಸುತ್ತಿದ್ದಾರೆ. ಅವನ್ನು ಬಾದಲು ಖಾಯಂ ಮಾಡಬೇಕು ಅವರು ಪ್ರೀತಿಯಿಂದ ಹದಾಬ್ದಾರಿಯಿಂದ ಕೆಲಸ ಈ ಲೈಬ್ರರಿಯ ಅಭಿವೃದ್ಧಿಯನ್ನ ಕಳ್ಳಿ ಹಳ್ಳಿಗೂ ತಲುಪಬೇಕು ಕೇವಲ ಬೆಂಗಳೂರು ಮುಂತಾದ ಪಟ್ಟಣಗಳಲ್ಲಿ ಲೈಬ್ರರಿಗಳು ಇದರೆ ಸಾಲದು. ಈ ಲೈಬ್ರರಿಗಳು ಗ್ರಾಮಾಂತರ ಜನಗಳಿಗೆ ಸಿಕ್ಕುವಂತಾಗಬೇಕು. ಈಗ ವಾನ್ಯ ವಿದ್ಯಾ ಮಂತ್ರಿಗಳು ಸಾರಿರತಕ್ಕ ತಿಮ್ಮಪಡಿ ಮಾನೂವಿಯನ್ನು ನಾನು ಸಾಗತಿಸುತ್ತೇನೆ. ಮಾನ್ಯ ವಿದ್ಯಾ ಸಚಿವರು ಈ ಲೈಬ್ರರಿ ಕಮಿಟಿಗೆ ಅಧ್ಯಕ್ಷರಾಗಿ ವ್ಯವಸ್ಥೆ ಈಗ ನಿಮ್ಮ ಮೇಜಿನ ಮೇಲೆ ತಂದಿದ್ದಾರೆ. ಇದು ನಾಮಧೇಯಗಳಿಗೆ ಇದು ಸರಿಬೆಳಕಾಗದೆ ಈ ಸಂಬಂಧಪಟ್ಟ ಪೋರ್ಟ್‌ಫೋಲಿಯೋ ಸಚಿವರೇ ಈ ಲೈಬ್ರರಿ ಕಮಿಟಿಯ ಅಧ್ಯಕ್ಷರಾಗಿ ಕೆಲಸವನ್ನು ನಿರ್ವಹಿಸಬೇಕು. ಮಾನ್ಯ ವಿದ್ಯಾ ಸಚಿವರಿಗೆ ಪುಸ್ತಕ ಹುಚ್ಚು ಬಹಳ ಇದೆ ಅವರು ಸಾವಿರಾರು ಪುಸ್ತಕಗಳನ್ನು ಆಧ್ಯಯನ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ನನಗೆ ತಿಳಿದಮಟ್ಟಿಗೆ ಮಾನ್ಯ ಮಿನ್ಸಿಪಲ್ ಸಾಹಿತ್ಯ ಪುಸ್ತಕಗಳನ್ನು ಅಧ್ಯಯನ ಮಾಡಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಅವರು ಇನ್ನೂರು ಮುನ್ನೂರು ಪುಸ್ತಕಗಳನ್ನು ಅಧ್ಯಯನ ಮಾಡಿದ್ದಾರೆ. ಅಂಥ ಘನ ಪಂಡಿತರು ಅದರ ಬಗ್ಗೆ ನಮಗೆ ಸಂದೇಹವಿಲ್ಲ. ಅವರು ನಿಮಿಷಕ್ಕೆ ಪುಸ್ತಕಗಳ ಪಟ್ಟಿಯನ್ನು ಕೊಟ್ಟರೆ ಅವುಗಳನ್ನು ಹಿಂದು ಲೈಬ್ರರಿಗೆ ಸೇರಿಸಿದರೆ ನಾವು ನಮ್ಮ ಅಭಿಪ್ರಾಯಗಳನ್ನು ಓದುವುದಕ್ಕೆ, ಅವಕಾಶವಾಗುತ್ತದೆ. ಅವರು ಬಹಳ ಅಪ್ರಕಟಿತ ಗ್ರಂಥಗಳನ್ನು ಓದಿದ್ದಾರೆ ಎಂದು ನಾನು

ಕೇಳಿದ್ದೇನೆ. ಅವರು ಯಾವ ಯಾವ ಗ್ರಂಥಗಳನ್ನು ಓದಿದ್ದಾರೆ ಎನ್ನುವ ಪರಿಚಯವನ್ನು ಮಾಡಿ ಕೊಟ್ಟರೆ ನಾವು ಸಹ ಅವುಗಳನ್ನು ಓದುವುದಕ್ಕೆ ಅವಕಾಶವಾಗುತ್ತದೆ. ಅವರ ಎಲ್ಲಾ ಪುಸ್ತಕ ಗಳನ್ನೂ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಥವಾ ನಮ್ಮ ಪಬ್ಲಿಕ್ ಲೈಬ್ರರಿಗೆ ದಾನವಾಗಿ ಕೊಟ್ಟರೆ ಅವುಗಳನ್ನು ಎಲ್ಲರೂ ಓದುವುದಕ್ಕೆ ಅವಕಾಶವಾಗುತ್ತದೆ. ಒಳ್ಳೆಯ ಪುಸ್ತಕಗಳು ಹಳ್ಳಿ ಗಳಿಗೆ ತಲುಪುವುದಕ್ಕೆ ವ್ಯವಸ್ಥೆ ಮಾಡಬೇಕು. ಗ್ರಾಮಾಂತರ ಪ್ರದೇಶದ ಜನಗಳಿಗೆ ಈ ಲೈಬ್ರರಿಯ ಸೌಲಭ್ಯ ದೊರೆಯುವಂತಾಗಬೇಕು, ಎಂದು ಹೇಳಿ ಈ ತಿದ್ದುಪಡಿಯನ್ನು ಸ್ವಾಗತಿ ನಾನು ನನ್ನ ವಾಕ್ಯವನ್ನು ಮುಗಿಸುತ್ತೇನೆ

† SRI B. B. SAYANAK (Belgaum).—I rise to support this Karnataka public Libraries (Amendment) Bill, 1975. The intention of this Bill is to constitute the State Library Authority for the purpose of organising and administering the Public Libraries. In our area there is a general library of more than 100 years old and it has got about 50,000 books of Marathi, Kannada and English. There is another Library called Saraswathi Library at Shahapur which is also more than 100 years old. About 3 or 5 years back the Government of Karnataka started Government Library in Belgaum. When this library was started, Government of Karnataka, has stopped the grant for general library. This grant was being given for the last 100 years. I want to ask why this grant has been stopped for the last 5 years.

MR. DEPUTY SPEAKER,—That is why I am stressing again and again not to go beyond the scope of the subject Taking advantage of the opportunity given the Honble Member is going beyond the scope of the Bill which is not correct. He could have put questions in the end and obtained the information. He could have sent a question seeking information about this subject. I once again request him to be within the scope of the amending Bill.

SRI B. B SAYANAK.—When everybody was speaking much beyond the scope of the Bill, I thought why should I not take advantage of this and speak everything connected with that subject. I am proud to say that the Hon'ble Minister Sri Mallikarjunaswamy being the Ex-officio chairman of this Central Library and being a man of honesty, sincerity, and integrity has refused to accept the Provice-chancellorship, We know he is not after power, but he is a learned man. I support he should be the Chairman of the Library Authority. While the Library Authority is being constituted, the Honble Minister should see that learned professors and men should have a chance to serve the cause. You are collecting cess for the Library, but you should not spend this cess amount for some other purpose except for this cause. With these few remarks I conclude my speech.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಉಪಾಧ್ಯಕ್ಷರೇ, ಈ ಒಂದು ತಿದ್ದುಪಡಿ ಮೇಲೆ ನನ್ನಾನ್ಯ ಸದಸ್ಯರು ಮಾತನಾಡಿ, ಈ ಒಂದು ಪುಸ್ತಕ ಭಂಡಾರದ ಚಳುವಳಿಯನ್ನು ಒಳ್ಳೆಯ ರೀತಿಯಲ್ಲಿ ಮಾಡಬೇಕು ಎಂದೂ ಸಂಘಟನೆಯನ್ನು ಚೆನ್ನಾಗಿ ಮಾಡಬೇಕೆಂದೂ ಹಾಗೂ

ಇನ್ನೂ ರಚನಾತ್ಮಕವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಒಂದು ವಿಷಯ ನನಗೇ ಕೇರಿರುವುದರಿಂದ ಮತ್ತು ನಾನೇ ಅಧ್ಯಕ್ಷನಾಗಿರುವುದರಿಂದ ಮಾನ್ಯ ಸದಸ್ಯರು ಕೊಟ್ಟರತಕ್ಕಂಥ ರಚನಾತ್ಮಕವಾದಂಥ ಸಲಹೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅವಕ್ಕೆ ಪೂರ್ಣವಾದಂಥ ಗಮನ ವನ್ನು ಕೊಡುತ್ತೇನೆಂದು ಹೇಳಿ, ಇದಕ್ಕೆ ಬೆಂಬಲ ಕೊಡಬೇಕೆಂದು ಮತ್ತೊಮ್ಮೆ ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ-

MR. DEPUTY SPEAKER.—I will put the consideration motion to the vote of the House.

The question is :

"That the Karnataka Public Libraries (Amendment) Bill, 1975 be taken into consideration "

The motion was adopted.

CLAUSES 2 TO 6

MR. DEPUTY SPEAKER.—There are no amendments.

The question is :

"That Clause 2 to 6, both inclusive, do stand part of the Bill."

The motion was adopted,

Clause 2 to 6 both inclusive, were added to the Bill.

CLAUSES 1 Etc

MR DEPUTY SPEAKER.—question is :

' That Clause 1 the long Title the Preamble and the Enacting formula do stand part of the Bill."

The motoin was adopted,

Clause I the long Title the Preamble and the Enacting formula were added to the Bill.

Motion to pass

SRI M. MALLIKARJUNASWAMY.— I Move :

"That the Karnataka Public Libraries (Amendment) Bill, 1975, be passed."

MR. DEPUTY SPEAKER.—The question is : "That the Karnataka Public Libraries
(Amendment) 1975, be passed.

The motion was adopted

and the Bill was passed.